



ನಮ್ಮ™ ಮಲ್ಲೇಶ್ವರ
Namma Malleshwara

# ಮಲ್ಲೇಶ್ವರ

## ಪ್ರಗತಿಯ ದಾಪುಗಾಲು


**ಡಾ. ಸಿ.ಎನ್. ಅಶ್ವತ್ಥ ನಾರಾಯಣ**

ಶಾಸಕರು, ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ
ಉನ್ನತ ಶಿಕ್ಷಣ, ವಿದ್ಯುನ್ಮಾನ, ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು,
ಕರ್ನಾಟಕ ಸರ್ಕಾರ


ಆರೋಗ್ಯ ಮಲ್ಲೇಶ್ವರ
ಉದ್ಯೋಗ ಮಲ್ಲೇಶ್ವರ
ಓದು ಮಲ್ಲೇಶ್ವರ
ನಮ್ಮ™ ಮಲ್ಲೇಶ್ವರ
Namma Malleshwara
ಸೌಕರ್ಯ ಮಲ್ಲೇಶ್ವರ
ಆಡು ಮಲ್ಲೇಶ್ವರ
ಸುಂದರ ಮಲ್ಲೇಶ್ವರ

# ಆತ್ಮೀಯ ಬಂಧುಗಳೇ

ಕಳೆದ ಹದಿನೈದು ವರ್ಷಗಳಿಂದ ನೀವು ನನ್ನ ಮೇಲೆ ವಿಶ್ವಾಸವಿಟ್ಟು ಈ ಕ್ಷೇತ್ರದ ಪ್ರತಿನಿಧಿಯಾಗಿ ಸತತವಾಗಿ ಚುನಾಯಿಸಿಕೊಂಡು ಬಂದಿದ್ದೀರಿ. ಅದು ನಿಮ್ಮ ಸೇವೆಗೆ ನನಗೆ ಸಿಕ್ಕ ಅವಕಾಶ ಎಂದು ನಾನು ಭಾವಿಸಿದ್ದೇನೆ. ನೀವು ನನ್ನ ಮೇಲೆ ಇಟ್ಟಿರುವ ನಂಬಿಕೆ ಮತ್ತು ತೋರಿಸಿರುವ ಪ್ರೀತಿ ನನ್ನನ್ನು ನಿತ್ಯವೂ ವಿನೀತನನ್ನಾಗಿ ಮಾಡುತ್ತಿದೆ.

ಮಲ್ಲೇಶ್ವರವು ತನ್ನದೇ ಆದ ಇತಿಹಾಸವನ್ನೂ ಪರಂಪರೆಯನ್ನೂ ಹೊಂದಿರುವ ಒಂದು ಕ್ಷೇತ್ರ. ಇಲ್ಲಿನ, ಸಂಪಿಗೆ, ಮಲ್ಲಿಗೆ, ಮಾವು, ಮಾರುಕಟ್ಟೆ, ದೇವಾಲಯಗಳು, ಸಜ್ಜನರು ಹೀಗೆ ಎಲ್ಲವೂ, ಎಲ್ಲರೂ ನನ್ನನ್ನು ಬಾಲ್ಯದಿಂದಲೂ ಸೆಳೆದುಕೊಂಡು ಬಂದಿವೆ. ನಾನು ಹದಿನೈದು ವರ್ಷಗಳ ಹಿಂದೆ ಈ ಕ್ಷೇತ್ರದ ಶಾಸಕನಾಗಿ ಆಯ್ಕೆಯಾದಾಗ ಇಲ್ಲಿ ಅನೇಕ ಮೂಲಸೌಕರ್ಯಗಳ ಸಮಸ್ಯೆಗಳು ಇದ್ದುದು ನನಗೆ ಎದ್ದು ಕಂಡಿತು.

ನಾನು ಶಾಸಕನಾದ ನಂತರ ಒಂದೊಂದೇ ಸಮಸ್ಯೆಯನ್ನು ಆಳವಾಗಿ ಅಧ್ಯಯನ ಮಾಡಿ ಅದಕ್ಕೆ ಏನು ಪರಿಹಾರ ಮಾಡಬೇಕು ಎಂದು ಆಲೋಚನೆ ಮಾಡಿದ್ದೇನೆ. ಮತ್ತು ಸೂಕ್ತ ಪರಿಹಾರಗಳನ್ನು ಕಂಡುಕೊಂಡು ಅವು ಅನುಷ್ಠಾನವಾಗುವಂತೆ ನೋಡಿಕೊಂಡಿದ್ದೇನೆ. ಈ ಪ್ರಕ್ರಿಯೆಯಲ್ಲಿ ಹಲವು ಅಡ್ಡಿ, ಆತಂಕಗಳನ್ನು, ಪ್ರಶ್ನೆಗಳನ್ನು ಕೂಡ ನಾನು ಎದುರಿಸಿದ್ದೇನೆ. ಆದರೆ, ಅವುಗಳಿಗೆ ಸೂಕ್ತ ಪರ್ಯಾಯ ಕಂಡುಕೊಳ್ಳುತ್ತಾ ಮತ್ತು ಅಭಿವೃದ್ಧಿಯ ಅಗತ್ಯತೆಯ ಮನವರಿಕೆ ಮಾಡಿಕೊಡುತ್ತಾ, ಆಗಿನ ಹಂತದಿಂದ ಈಗಿನ ಹಂತದ ವರೆಗೆ ತಂದು ನಿಲ್ಲಿಸಿದ್ದೇನೆ. ದೊಡ್ಡ ಮಟ್ಟದ ಪ್ರಗತಿಯಾಗುವಾಗ ಸಣ್ಣ ಪುಟ್ಟ ಅಡಚಣೆಗಳನ್ನು, ತೊಂದರೆಗಳನ್ನು ಜನರು ಅನುಭವಿಸಲೇಬೇಕಾಗುತ್ತದೆ ಎಂಬುದನ್ನು ನನ್ನ ಕ್ಷೇತ್ರದ ಜನರು ತಾವಾಗಿಯೇ ಅರಿತು ಸಹಕಾರ ನೀಡಿರುವುದು ನನ್ನಲ್ಲಿ ಕೃತಜ್ಞತಾ ಭಾವನೆಯನ್ನು ಮೂಡಿಸಿದೆ. ಮತ್ತು ನಾನು ಪ್ರಗತಿಯ ಹಾದಿಯಲ್ಲಿ ಇನ್ನಷ್ಟು ತನ್ಮಯವಾಗಿ ಸಾಗುವಂತೆ ಮಾಡಿದೆ.

ಮಲ್ಲೇಶ್ವರವು ಇಂದು ಇಡೀ ರಾಜ್ಯದಲ್ಲಿಯೇ ಅತ್ಯಂತ ಉತ್ಕೃಷ್ಟ ಮೂಲಸೌಕರ್ಯಗಳೊಂದಿಗೆ ಒಂದು ಮಾದರಿ ಕ್ಷೇತ್ರವಾಗಿ ಪರಿಣಮಿಸಿದೆ. ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆಗೆ ನಾವು ಸುಸ್ಥಿರ ಎನಿಸುವಂಥ ಪರಿಹಾರಗಳನ್ನು ಕಂಡುಕೊಂಡಿದ್ದೇವೆ. ಕುಡಿಯುವ ನೀರು ಪೂರೈಕೆಯಲ್ಲಿ ಇದ್ದ ಅಡಚಣೆಗಳನ್ನು ನಿವಾರಿಸಿದ್ದೇವೆ. ರಸ್ತೆಗಳನ್ನು ದೀರ್ಘಕಾಲದವರೆಗೆ ಬಾಳಿಕೆ ಬರುವಂತೆ ಆಧುನೀಕರಣಗೊಳಿಸಿದ್ದೇವೆ. ನಗರಗಳ ಶ್ವಾಸಕೋಶ ಎನಿಸಿರುವ ಉದ್ಯಾನಗಳ ಅಂದ ಹೆಚ್ಚಿಸಿದ್ದೇವೆ. ಮಳೆ ನೀರು ಇಂಗುಗುಂಡಿಗಳನ್ನು ನಿರ್ಮಿಸುವ ಮೂಲಕ ಅಂತರ್ಜಲ ಮಟ್ಟ ಹೆಚ್ಚಿಸಿದ್ದೇವೆ. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳು ನನ್ನ ಮೊದಲ ಆದ್ಯತೆಗಳು ಎನ್ನುವುದು ನಿಜವಾದರೂ, ಕ್ರೀಡೆ ಮತ್ತು ಕೌಶಲ್ಯಾಭಿವೃದ್ಧಿಗಳೂ ನನಗೆ ಅಷ್ಟೇ ಮುಖ್ಯ ಅನಿಸುತ್ತದೆ.

ನನ್ನ ಕ್ಷೇತ್ರದ ಎಲ್ಲ ವಲಯಗಳಲ್ಲಿ ನಾಗರಿಕರ ಕುಂದುಕೊರತೆ ನಿವಾರಣೆಗೂ ನಾನು ಯಾವಾಗಲೂ ಆದ್ಯತೆ ಕೊಟ್ಟುಕೊಂಡು ಬಂದಿದ್ದೇನೆ. ಆದರೆ, ಕೋವಿಡ್-19 ರ ಸಮಯದಲ್ಲಿ ನಾನು ಮಾಡಿದ ಕೆಲಸ ಅಥವಾ ಜನರಿಗೆ ಮಾಡಿದ ಸೇವೆ ನನಗೆ ಅತ್ಯಂತ ಹೆಚ್ಚಿನ ಸಂತೋಷ ಕೊಟ್ಟಿದೆ.

ವೃತ್ತಿಯಿಂದ ಒಬ್ಬ ವೈದ್ಯನಾಗಿ, ನನ್ನ ಅನುಭವವು, ಕೋವಿಡ್ ಸಾಂಕ್ರಾಮಿಕದ ಸಮಯದಲ್ಲಿ ನೀತಿ ನಿರೂಪಣೆಗೆ ಸಂಬಂಧಿಸಿದಂತೆ ಮತ್ತು ಕಾರ್ಯತಂತ್ರ ರೂಪಿಸಲು, ಸರ್ಕಾರದ ಒಳಗಡೆ ಮತ್ತು ಹೊರಗಡೆ ಸಮರ್ಥವಾದ ಪಾಲುಗೊಳ್ಳುವಿಕೆಯನ್ನು ಸಾಧ್ಯ ಮಾಡಿದೆ. ಅದರಿಂದ ಸಾಂಕ್ರಾಮಿಕವನ್ನು ಸಮರ್ಥವಾಗಿ ಎದುರಿಸಲು ನಮಗೆ ಸಾಧ್ಯವಾಯಿತು.

ಈ ಐದು ವರ್ಷಗಳಲ್ಲಿ ನನ್ನ ಸಾಧನೆಗಳನ್ನು ಅಥವಾ ನಾನು ಕ್ಷೇತ್ರಕ್ಕೆ ಮಾಡಿದ ಕೆಲಸಗಳನ್ನು ಈ ಬುಕ್‌ಲೆಟ್‌ನಲ್ಲಿ ನಿಮ್ಮ ಮುಂದೆ ಮಂಡಿಸಲು ಒಂದು ಚಿಕ್ಕ ಪ್ರಯತ್ನ ಮಾಡಿರುವೆ. ಒಂದು ಸಾರಿ ಈ ಎಲ್ಲ ಕೆಲಸಗಳನ್ನು ನಾನೇ ಒಮ್ಮೆ ಹಿಂತಿರುಗಿ ನೋಡಿದಾಗ ನನ್ನ ಮನಸ್ಸು ಸಾರ್ಥಕತೆಯಿಂದ ನಮ್ರವಾಗುತ್ತದೆ.

ಕ್ಷೇತ್ರದ ಅಭಿವೃದ್ಧಿಯಲ್ಲಿ ನಿಮ್ಮ ಸಹಕಾರ ಸ್ಮರಣೀಯ ಎನ್ನುವಂತೆ ಇದೆ. ಇದೇ ರೀತಿ ನಿಮ್ಮ ಸಹಕಾರದೊಂದಿಗೆ ಮತ್ತು ಬೆಂಬಲದೊಂದಿಗೆ ನಾವು ಮಲ್ಲೇಶ್ವರವನ್ನು ಜೀವಿಸಲು ಅತ್ಯುತ್ತಮ ತಾಣ ಎನ್ನುವಂತೆ ಮಾಡುವ ಗುರಿ ನನ್ನ ಮುಂದೆ ಇದೆ. ಈ ಪಯಣದಲ್ಲಿ ನಾನು ನಿಮ್ಮ ನೆರವನ್ನು ಬಯಸುತ್ತೇನೆ. ಈ ದಿಸೆಯಲ್ಲಿ ಜತೆಯಾಗಿ ಕೆಲಸ ಮಾಡೋಣ ಎಂದು ಕೇಳಿಕೊಳ್ಳುತ್ತೇನೆ.

ಭವಿಷ್ಯದ ಸುಂದರ ಮಲ್ಲೇಶ್ವರದ ಕನಸನ್ನು ನನ್ನ ಜತೆಗೆ ಕಾಣುತ್ತಿರುವ ನಿಮಗೆ ನಾನು ಸದಾ ಆಭಾರಿಯಾಗಿರುತ್ತೇನೆ.

**ನಿಮ್ಮ ಸೇವಾಕಾಂಕ್ಷಿ,**

**ಡಾ. ಸಿ.ಎನ್. ಅಶ್ವತ್ಥ ನಾರಾಯಣ**
ಶಾಸಕರು, ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ
ಉನ್ನತ ಶಿಕ್ಷಣ, ವಿದ್ಯುನ್ಮಾನ, ಐಟಿ-ಬಿಟಿ
ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು
ಕರ್ನಾಟಕ ಸರ್ಕಾರ



ನಿಮ್ಮೆಲ್ಲರ ಆಶೀರ್ವಾದದಿಂದ ಕರ್ನಾಟಕದ ಕ್ಯಾಬಿನೆಟ್ ಮಂತ್ರಿ ಮತ್ತು ಉಪಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಲು ಅವಕಾಶ ನೀಡಿದ್ದಕ್ಕಾಗಿ ಹೃತ್ಪೂರ್ವಕ ಕೃತಜ್ಞತೆಗಳು



## ಆರೋಗ್ಯ ಮಲ್ಲೇಶ್ವರ

**ಶುಶ್ರೂಷೆಯ ನೈಜ ಕಾಳಜಿ:**

ಡಾ. ಅಶ್ವತ್ಥ ನಾರಾಯಣ ಅವರು ವೃತ್ತಿಯಿಂದ ಒಬ್ಬ ವೈದ್ಯ. ಮನುಷ್ಯನಿಗೆ ಆರೋಗ್ಯ ಎಷ್ಟು ಮುಖ್ಯ ಎಂದು ಅವರಿಗಿಂತ ಹೆಚ್ಚು ತಿಳಿದವರು ಯಾರು ಇರಲು ಸಾಧ್ಯ? ಕೇವಲ ವೈದ್ಯರು ಮಾತ್ರವಲ್ಲದೇ ಒಬ್ಬ ಶಾಸಕರೂ ಆಗಿರುವುದು ಅವರ ಹೆಚ್ಚುಗಾರಿಕೆ. ಅವರು ಶಾಸಕರಾಗಿರುವುದು ತಾವು ಕನಸು ಕಂಡುದನ್ನು ಸಾಧಿಸಲು, ಜಾರಿಗೊಳಿಸಲು ಅನುವು ಮಾಡಿತು. 2020 ರ ಮಾರ್ಚ್‌ನಲ್ಲಿ ಇಡೀ ದೇಶವನ್ನು ಕೋವಿಡ್ ಸಾಂಕ್ರಾಮಿಕ ಆವರಿಸಿದಾಗ ಅವರ ವೈದ್ಯಕೀಯ ಅನುಭವ ಅವರ ಕ್ಷೇತ್ರದ ಮಲ್ಲೇಶ್ವರದ ಜನರಿಗೆ ಒಂದು ವರವಾಗಿ ಪರಿಣಮಿಸಿತು. **ಕೋವಿಡ್–19 ಕಾರ್ಯಪಡೆಯ ಮುಖ್ಯಸ್ಥರೂ** ಆಗಿದ್ದ ಅವರ ಅಹೋರಾತ್ರಿ ಪ್ರಯತ್ನಗಳು ಮತ್ತು ದೂರದೃಷ್ಟಿ ಇಡೀ ಕ್ಷೇತ್ರದಲ್ಲಿ ಮಹತ್ತರ ಎನಿಸುವಂಥ ಪರಿಣಾಮ ಬೀರಿತು. ಮಲ್ಲೇಶ್ವರ ಕ್ಷೇತ್ರದಲ್ಲಿ ಅವರು ಕೈಗೊಂಡ ಮುಂಜಾಗ್ರತಾ ಕ್ರಮಗಳು ಇಡೀ ರಾಜ್ಯದಾದ್ಯಂತ ಅನುಸರಣೆಗೊಂಡುವು.

ಡಾ. ಅಶ್ವತ್ಥ ನಾರಾಯಣ ಅವರು ತಮ್ಮ ಕ್ಷೇತ್ರದಲ್ಲಿ ಅನೇಕ ನವೀನ ಆರೋಗ್ಯ ರಕ್ಷಣೆಯ ಉಪಕ್ರಮಗಳನ್ನು ರೂಪಿಸಿದರು ಮತ್ತು ಅವುಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುವಂತೆ ಮಾಡಿದರು.

## ಕೆ.ಸಿ. ಜನರಲ್ ಆಸ್ಪತ್ರೆಗೆ ನವ ಚೈತನ್ಯ

# K.C. GENERAL ಈಗ SPECIAL:

ಬೆಂಗಳೂರಿನ ಜನರ ಹೃದಯಕ್ಕೆ ಸಂಬಂಧಪಟ್ಟ ಎಲ್ಲಾ ಚಿಕಿತ್ಸೆಗಳನ್ನು ಕೈಗೆಟಕುವ ದರದಲ್ಲಿ ನೀಡುತ್ತಿರುವುದೇ **ಜಯದೇವ ಹೃದ್ರೋಗ ಸಂಸ್ಥೆ.** ಮತ್ತು ಮಕ್ಕಳ ಎಲ್ಲಾ ಆರೋಗ್ಯ ಸಮಸ್ಯೆಗಳಿಗೆ ಸಂಜೀವಿನಿಯೇ **ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ.**


ಈ ಎರಡೂ ಪ್ರಮುಖ ಆರೋಗ್ಯ ಸಂಸ್ಥೆಗಳ ತಲಾ **50 ಹಾಸಿಗೆಗಳ ಘಟಕಗಳು ಬೆಂಗಳೂರಿನಲ್ಲೇ ಪ್ರಥಮ ಬಾರಿಗೆ ಈಗ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಪ್ರಾರಂಭವಾಗಿವೆ.** ಮಲ್ಲೇಶ್ವರ ಹಾಗೂ ಉತ್ತರ ಬೆಂಗಳೂರಿನ ಎಲ್ಲಾ ನಾಗರಿಕರಿಗೆ ಮಲ್ಲೇಶ್ವರದಲ್ಲಿಯೇ ಸೌಲಭ್ಯ ಸಿಗಲಿದೆ.

- ಮೊದಲ ಬಾರಿಗೆ **50 ಹಾಸಿಗೆಗಳ ಸುಸಜ್ಜಿತ ತುರ್ತು ಚಿಕಿತ್ಸೆ ಘಟಕ (Trauma Care)** ಕೆಲಸ ಪ್ರಗತಿಯಲ್ಲಿ
- ರೋಗಿಯ ಪ್ರತಿಯೊಂದು **Vital Parameter**ಗಳ ಮಾಹಿತಿ ನೀಡುವ **Hi-Tech Monitor**ಗಳ ಅಳವಡಿಕೆ: **300 ಹಾಸಿಗೆಗಳಿಗೆ**
- **Operation Oxygen** ಕಾರ್ಯಾಚರಣೆ ಮೂಲಕ ಕೋವಿಡ್ ಸಮಯದಲ್ಲಿ Oxygen ಕೊರತೆಯಾಗದಂತೆ ನಿರ್ವಹಣೆ




ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ಮಕ್ಕಳ ತೀವ್ರ ನಿಗಾ ಘಟಕವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಕ್ಟೋಬರ್ 6, 2022 ರಂದು ಉದ್ಘಾಟಿಸಿದ ಕ್ಷಣ

### ಕೆ.ಸಿ. ಜನರಲ್ – ಮೇಲ್ದರ್ಜೆಗೆ ಏರಿದ ನಂತರ






ಹಿರಿಯ ಹೃದ್ರೋಗ ತಜ್ಞ ಡಾ.ಸಿ.ಎನ್. ಮಂಜುನಾಥ್ ಮತ್ತು ಡಾ. ಅಶ್ವತ್ಥ ನಾರಾಯಣ, ಕೆ.ಸಿ. ಜನರಲ್‌ನಲ್ಲಿನ ಜಯದೇವ ಸ್ಯಾಟಲೈಟ್ ಕಾರ್ಡಿಯಾಕ್ ಸೆಂಟರ್‌ನಲ್ಲಿರುವ ಕ್ಯಾಥ್ ಲ್ಯಾಬ್ ಅನ್ನು ಪರಿಶೀಲಿಸಿದರು

ನಮ್ಮ ಮಲ್ಲೇಶ್ವರ
Namma Malleshwara
#ಆರೋಗ್ಯಮಲ್ಲೇಶ್ವರ

## ನಮ್ಮ PHC ಈಗ
# Multi-Speciality DHC:

**ಸಾವಿರಾರು ರೂಪಾಯಿಗಳ ಖರ್ಚಿನ ಹೊರೆಯಿಂದ ಮುಕ್ತಿ ಖಚಿತ**
**ಎಲ್ಲಾ ಸುಸಜ್ಜಿತ ಆರೋಗ್ಯ ಸೇವೆಗಳು ಉಚಿತ**


- ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರಗಳು **(PHC)** ಈಗ **Digital Health Clinic (DHC)** ಗಳಾಗಿ ಮೇಲ್ದರ್ಜೆಗೆ
- ಮಲ್ಲೇಶ್ವರದ **PHC** ಗಳಲ್ಲಿ ದೇಶದಲ್ಲೇ ಮೊದಲ ಬಾರಿಗೆ **MD Physicians, ದಂತ, ನೇತ್ರ, Physiotherapy, ತುರ್ತು ಚಿಕಿತ್ಸೆ, X-Ray** ಮತ್ತು **Laboratory** ಸೌಲಭ್ಯಗಳು
- **ಮಿಂಟೋ ಆಸ್ಪತ್ರೆ** ಸಹಯೋಗದೊಂದಿಗೆ ಕಣ್ಣಿಗೆ ಸಂಬಂಧಪಟ್ಟ ಎಲ್ಲಾ ತಜ್ಞ ಸೇವೆಗಳು

ನಮ್ಮ™ ಮಲ್ಲೇಶ್ವರ
Namma Malleshwara
#ಆರೋಗ್ಯಮಲ್ಲೇಶ್ವರ




ಡಿಸೆಂಬರ್ 18, 2022 ರಂದು ಮತ್ತಿಕೆರೆ ಪಿ.ಎಚ್.ಸಿ.ಯಲ್ಲಿ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಮತ್ತು ಡಾ. ಅಶ್ವತ್ಥ ನಾರಾಯಣ

ನಮ್ಮ ಮಲ್ಲೇಶ್ವರ
Namma Malleshwara
#ಆರೋಗ್ಯಮಲ್ಲೇಶ್ವರ










- ಪ್ರತಿ PHC ಯಲ್ಲಿನ **PM ಜನೌಷಧಿ ಕೇಂದ್ರಗಳಲ್ಲಿ 70% ವರೆಗಿನ ರಿಯಾಯಿತಿ ದರದಲ್ಲಿ** ಗುಣಮಟ್ಟದ ಔಷಧಿಗಳು ಲಭ್ಯ.
- ರೋಗಿಯ ಪೂರ್ಣ ಮಾಹಿತಿ **Digital Medical Records** ರೂಪದಲ್ಲಿ ದಾಖಲಾತಿ ಮತ್ತು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಮುಂದಿನ ಚಿಕಿತ್ಸೆಗಳಿಗೆ ಲಭ್ಯ
- ಹೃದಯ, ಕಿಡ್ನಿ, ಲಿವರ್ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ **250 ಕ್ಕೂ ಹೆಚ್ಚು ಉಚಿತ Laboratory Tests** ಮತ್ತು **Radiologist** ಸಲಹೆಯೊಂದಿಗೆ **X-Ray** ಸೌಲಭ್ಯಗಳು

ನಮ್ಮ ಕ್ಲಿನಿಕ್

# ನಮಗಾಗಿ ನಮ್ಮವರಿಗಾಗಿ:

ನಮ್ಮ ಮಲ್ಲೇಶ್ವರ
Namma Malleshwara
#ಆರೋಗ್ಯಮಲ್ಲೇಶ್ವರ




- ಮನೆ ಬಳಿಯೇ ಆರೋಗ್ಯ ಸೇವೆಗಾಗಿ ವಾರ್ಡ್‌ಗೊಂದು **PHC** ಜೊತೆಗೆ ವಾರ್ಡ್‌ಗೊಂದು **ನಮ್ಮ ಕ್ಲಿನಿಕ್**
- **MBBS** ವೈದ್ಯರಿಂದ ಚಿಕಿತ್ಸೆ
- **18 Laboratory** ಸೌಲಭ್ಯಗಳು

## ಲ್ಯಾಬ್ ಇನ್‌ವೆಸ್ಟಿಗೇಷನ್

### ಖಾಸಗಿ ಲ್ಯಾಬ್‌ಗಳು v/s ಡಿಜಿಟೈಸ್ಡ್ PHC ಲ್ಯಾಬ್‌ಗಳು

| ಕ್ರ. ಸಂ. | ಇನ್‌ವೆಸ್ಟಿಗೇಷನ್ (ಪರೀಕ್ಷೆ) | ಖಾಸಗಿ ದರ | PHCs |
|---|---|---|---|
| 1. | ಎಫ್‌ಬಿಎಸ್ | ₹65 | FREE |
| 2. | ಪಿಪಿಬಿಎಸ್ | ₹65 | FREE |
| 3. | ಆರ್‌ಬಿಎಸ್ | ₹65 | FREE |
| 4. | ಲಿಪಿಡ್ ಪ್ರೊಫೈಲ್ | ₹560 | FREE |
| 5. | ಲಿವರ್ ಫಂಕ್ಷನ್ ಟೆಸ್ಟ್ | ₹760 | FREE |
| 6. | ಯುರಿಯಾ | ₹130 | FREE |
| 7. | ಕ್ರಿಯೇಟಿನೈನ್ | ₹120 | FREE |
| 8. | ಯುರಿಕ್ ಆಸಿಡ್ | ₹160 | FREE |
| 9. | ಎಚ್‌ಬಿಎ1ಸಿ | ₹520 | FREE |
| 10. | ಇಎಸ್‌ಆರ್ | ₹110 | FREE |
| 11. | ಕಂಪ್ಲೀಟ್ ಬ್ಲಡ್ ಕೌಂಟ್ | ₹350 | FREE |
| 12. | ಯೂರಿನ್ ರೂಟೀನ್ | ₹150 | FREE |
| 13. | ಡಿ–ಡೈಮರ್ (ಇಎಲ್‌ಎಫ್‌ಎ) | ₹1,440 | FREE |
| 14. | ರೇಡಿಯಾಲಜಿ ಸರ್ವೀಸಸ್ (X-Ray) | ₹350 | FREE |

## PHC ಗಳು ಈಗ ಹೆಚ್ಚು ಸಾರ್ವಜನಿಕ ಸ್ನೇಹಿ

**200**

**ಮೇಲ್ದರ್ಜೆಗೆ ಏರುವುದಕ್ಕೆ ಮುಂಚೆ:**
PHCಗಳಿಗೆ ಪ್ರತಿ ದಿನ ಸರಾಸರಿ ಭೇಟಿ ನೀಡುತ್ತಿದ್ದ ಜನರ ಸಂಖ್ಯೆ

**2,000**

**ಮೇಲ್ದರ್ಜೆಗೆ ಏರಿದ ನಂತರ:**
PHC ಮತ್ತು ನಮ್ಮ ಕ್ಲಿನಿಕ್‌ಗಳಿಗೆ ಪ್ರತಿ ದಿನ ಸರಾಸರಿ ಭೇಟಿ ನೀಡುತ್ತಿರುವ ಜನರ ಸಂಖ್ಯೆ





ನಮ್ಮ ಮಲ್ಲೇಶ್ವರ
Namma Malleshwara
#ಆರೋಗ್ಯಮಲ್ಲೇಶ್ವರ

## SMART VIRTUAL CLINICS (SVCs)

## ಸ್ಮಾರ್ಟ್ ಬೆಂಗಳೂರಿಗೆ ಸ್ಮಾರ್ಟ್ ಆರೋಗ್ಯ ಸೇವೆ:

- **ಪ್ರತಿ PHC ಯಲ್ಲಿ Smart Virtual Clinic** ಮೂಲಕ ತಜ್ಞ ವೈದ್ಯರಿಂದ ಚಿಕಿತ್ಸೆ
- ಹೃದ್ರೋಗ, ಶ್ವಾಸಕೋಶ, ಕಣ್ಣು, ಕಿವಿ, ಮೂಗು, ಮೂಳೆ, ಚರ್ಮ ಸೇರಿದಂತೆ 9 ವಿಭಾಗಗಳಲ್ಲಿ **Specialists ಸೇವೆ ಲಭ್ಯ**
- **Technology Interfaced Medical Equipment** ಮೂಲಕ ರೋಗಿಯ **Virtual ತಪಾಸಣೆ ಮತ್ತು ಸಲಹೆ**






ಕೋವಿಡ್ ನಿರ್ವಹಣೆ

# ಮಲ್ಲೇಶ್ವರದ ಜನರ ಹೆಗಲಿಗೆ ಹೆಗಲು ಕೊಟ್ಟು ಮನಃಪೂರ್ವಕ ಸೇವೆ:



ನಮ್ಮ ಮಲ್ಲೇಶ್ವರ
Namma Malleshwara
#ಆರೋಗ್ಯಮಲ್ಲೇಶ್ವರ

- ಮಲ್ಲೇಶ್ವರದಲ್ಲಿ ಅಂದಾಜು **7 ಲಕ್ಷ Vaccine Dose**ಗಳ ನೀಡಿಕೆ
- **1 ಲಕ್ಷಕ್ಕೂ** ಹೆಚ್ಚು ಜನರಿಗೆ **CSR ಮೂಲಕ Vaccination**
- ರಾಜ್ಯದ **ಮೊದಲ 24/7 ಲಸಿಕಾ ಕೇಂದ್ರ** ಸ್ಥಾಪನೆ
- ವ್ಯಾಕ್ಸಿನೇಷನ್ ಕೇಂದ್ರಕ್ಕೆ ಬಂದು ಲಸಿಕೆ ಪಡೆಯಲು ಸಾಧ್ಯವಾಗದವರ **ಮನೆ ಮನೆಗೆ ತೆರಳಿ ಲಸಿಕೆ** ನೀಡಿಕೆ
- ಉಚಿತವಾಗಿ **ಮಾಸ್ಕ್, ಸ್ಯಾನಿಟೈಸರ್ ಮತ್ತು ಔಷಧಿಗಳ ವಿತರಣೆ**
- **ಸಂಚಾರಿ ವ್ಯಾಕ್ಸಿನೇಷನ್ ಕೇಂದ್ರಗಳ ಸೌಲಭ್ಯ** ಮತ್ತು **ಆಕ್ಸಿಜನ್ ಕಾನ್ಸಂಟ್ರೇಟರ್ಸ್‌ಗಳ ಪೂರೈಕೆ**



ಆಕ್ಸಿಜನ್ ಕನ್ಸಂಟ್ರೇಟರ್ಸ್‌ಗಳ ಪೂರೈಕೆ

- ಮೊದಲ **Oxygen Concentrator Bank** ಸ್ಥಾಪನೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಮನೆಗಳಿಗೆ ವಿತರಣೆ
- ಮನೆ ಮನೆಗಳಿಗೆ **2.70 ಲಕ್ಷ ಆಹಾರದ ಪೊಟ್ಟಣಗಳ ವಿತರಣೆ**
- **'ಎಂಎಲ್ಎ ಕೇರ್ಸ್'** ಅಡಿಯಲ್ಲಿ **40,000 ಪಡಿತರ ಕಿಟ್‌ಗಳ ವಿತರಣೆ** – ಎರಡು ಸಾರಿ
- **1.80 ಲಕ್ಷ ಲೀಟರ್ ಹಾಲು ಪೂರೈಕೆ**
- ಕೋವಿಡ್ ಸೋಂಕಿತರ ಸಮರ್ಪಕ ಚಿಕಿತ್ಸೆಗೆ ಅಗತ್ಯವಾದ ಕೋವಿಡ್ ಪ್ರೊಫೈಲ್ ಟೆಸ್ಟ್‌ಗಾಗಿ **ಮನೆ ಮನೆಗೆ ತೆರಳಿ ರಕ್ತದ ಮಾದರಿ ಸಂಗ್ರಹ**
- **Drive-Through Swab** ಸಂಗ್ರಹ
- **ಬಿಬಿಎಂಪಿ** ಆರೋಗ್ಯ ಕೇಂದ್ರಗಳಲ್ಲಿನ **ಕ್ಲಿನಿಕಲ್ ಆರೋಗ್ಯ ವ್ಯವಸ್ಥೆಯ ಸುಧಾರಣೆ**
- Quarantine ರೋಗಿಗಳಿಗೆ ಔಷಧಿ ಹಂಚಿಕೆ



ಕೋವಿಡ್–19: ಸ್ವಾಬ್ ಸಂಗ್ರಹಣೆ ಅಭಿಯಾನ



ಉಚಿತವಾಗಿ ಮಾಸ್ಕ್, ಸ್ಯಾನಿಟೈಸರ್ ಮತ್ತು ಔಷಧಿಗಳ ವಿತರಣೆ




2.70 ಲಕ್ಷ ಆಹಾರದ ಪೊಟ್ಟಣಗಳ ವಿತರಣೆ

## ಓದು ಮಲ್ಲೇಶ್ವರ

ಶ್ರೇಷ್ಠತೆಯ ಬುನಾದಿ:

ಡಾ. ಅಶ್ವತ್ಥ ನಾರಾಯಣ ಅವರು ತಮ್ಮ ಕ್ಷೇತ್ರದಲ್ಲಿ ಗುಣಮಟ್ಟದ, ಎಲ್ಲರಿಗೂ ಲಭ್ಯ ಇರುವ ಮತ್ತು ಕಡಿಮೆ ವೆಚ್ಚದ ಶಿಕ್ಷಣ ಸಿಗಬೇಕು ಎಂಬುದರಲ್ಲಿ ಯಾವಾಗಲೂ ನಂಬಿಕೆಯಿಟ್ಟುಕೊಂಡು ಕೆಲಸ ಮಾಡಿದವರು ಮತ್ತು ಮಾಡುತ್ತ ಇರುವವರು. ಮಲ್ಲೇಶ್ವರದ ಸರ್ಕಾರಿ ಶಾಲೆಗಳು ಇಡೀ ರಾಜ್ಯದಲ್ಲಿ ಮಾದರಿ ಶಾಲೆಗಳು ಎಂಬ ಹೆಗ್ಗಳಿಕೆ ಗಳಿಸಿವೆ. ಕಲಿಕೆಯ ಎಲ್ಲ ಆಯಾಮಗಳನ್ನು ಒಳಗೊಂಡಿರುವ ಈ ಶಾಲೆಗಳು ಅತ್ಯುನ್ನತ ಗುಣಮಟ್ಟವನ್ನು ಸಾಧಿಸಿವೆ. ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳೆರಡರಲ್ಲೂ ಇಲ್ಲಿ ಶಿಕ್ಷಣ ದೊರೆಯುತ್ತಿದೆ. ಹೀಗಾಗಿ ಯಾರೇ ಆಗಲಿ ಮಲ್ಲೇಶ್ವರದ ಶಾಲೆಗಳು **ಅತ್ಯುತ್ತಮ ಸರ್ಕಾರಿ ಶಾಲೆಗಳು** ಎಂದು ಹೆಮ್ಮೆಯಿಂದ ಹೇಳಬಹುದು. ಇಲ್ಲಿ ಕಲಿಕಾ ಪದ್ಧತಿಯ ಸುಧಾರಣೆಗೆ ಒತ್ತು ನೀಡಲಾಗಿದ್ದು ಶಿಕ್ಷಕರ ಸಾಮರ್ಥ್ಯ ವೃದ್ಧಿಯ ಮೂಲಕ ಅವರನ್ನು ಸಶಕ್ತರನ್ನಾಗಿ ಮಾಡಲಾಗಿದೆ. ಅವರ ಈ ಎಲ್ಲ ಉಪಕ್ರಮಗಳಿಂದ ಒಟ್ಟಾರೆ ಶಾಲೆಗಳ ಗುಣಮಟ್ಟ ಸುಧಾರಿಸಿದೆ ಮತ್ತು ಶಾಲೆಗಳ ಪ್ರವೇಶ ಸಂಖ್ಯೆ ಹೆಚ್ಚಿದೆ.



## MALLESHWARA SCHOOL MODEL (MSM):

# ರಾಷ್ಟ್ರಕ್ಕೇ ಮಾದರಿ

ನಮ್ಮ ಮಕ್ಕಳು – ನಮ್ಮ ಭವಿಷ್ಯ । ನಮ್ಮ ಶಾಲೆಗಳು – ನಮ್ಮ ಹೆಮ್ಮೆ

ನಮ್ಮ ಮಲ್ಲೇಶ್ವರ
Namma Malleshwara
#ಒದುಮಲ್ಲೇಶ್ವರ

- ಮಲ್ಲೇಶ್ವರ ಸರ್ಕಾರಿ ಶಾಲೆಗಳಲ್ಲಿ 1-10ನೇ ತರಗತಿಯವರೆಗೆ 3,116 ವಿದ್ಯಾರ್ಥಿಗಳಿಂದ ವ್ಯಾಸಂಗ
- 13 ಕ್ಯಾಂಪಸ್‌ಗಳಲ್ಲಿನ 23 ಶಾಲೆಗಳಲ್ಲಿ **ಸುಸಜ್ಜಿತ ಮೂಲ ಸೌಕರ್ಯ**
- **Dr. CNA Foundation ವತಿಯಿಂದ ಎಲ್ಲಾ 13 ಶಾಲೆಗಳ ಸ್ವಚ್ಛತೆಯ ಸಂಪೂರ್ಣ ಜವಾಬ್ದಾರಿ**
- ಎಲ್ಲಾ ಶಾಲೆಗಳಿಗೆ **Wi-Fi ಸೌಲಭ್ಯ**
- ಪ್ರತಿ ಶಾಲೆಗೆ ಒಂದರಂತೆ **ಸ್ಮಾರ್ಟ್ ಬೋರ್ಡ್** ಅಳವಡಿಕೆ
- ಎಲ್ಲಾ 70 ತರಗತಿ ಕೊಠಡಿಗಳಿಗೆ **55" ಸ್ಮಾರ್ಟ್ ಟಿ.ವಿ**
- ಪ್ರೌಢಶಾಲೆಗಳ **ಎಲ್ಲಾ 1,124 ವಿದ್ಯಾರ್ಥಿಗಳಿಗೆ ಉಚಿತ Tablet PC**
- 4–7ನೇ ತರಗತಿಯವರೆಗೆ ಪ್ರತಿ ನಾಲ್ಕು ವಿದ್ಯಾರ್ಥಿಗಳಿಗೆ ಒಂದರಂತೆ ಲ್ಯಾಪ್‌ಟಾಪ್ – 1072 ವಿದ್ಯಾರ್ಥಿಗಳು/**336 ಲ್ಯಾಪ್‌ಟಾಪ್**
- 4–7ನೇ ತರಗತಿಯ ವಿದ್ಯಾರ್ಥಿಗಳಿಗೆ 3,750 **Foundational Literacy and Numeracy (FLN)** ಆಧಾರಿತ ಗಣಿತ/ಇಂಗ್ಲಿಷ್/ಕನ್ನಡ ವರ್ಕ್ ಬುಕ್‌ಗಳ ವಿತರಣೆ
- 7ನೇ ತರಗತಿಗೆ ವಿಜ್ಞಾನ ವಿಷಯಕ್ಕೆ ಪ್ರಾಯೋಗಿಕವಾಗಿ **ಡಿಜಿಟಲ್ ಕಂಟೆಂಟ್ (Lesson Plan)** ಪೂರೈಕೆ

**ಸ್ಮಾರ್ಟ್ ಮಲ್ಲೇಶ್ವರ ಶಾಲೆಗಳು**

| 2015-16 | 2022-23 |
|---|---|
| 23 ಲ್ಯಾಪ್‌ಟಾಪ್ | 336 ಲ್ಯಾಪ್‌ಟಾಪ್ |
| 22 ಸ್ಮಾರ್ಟ್ ಟಿ.ವಿ | 70 ಸ್ಮಾರ್ಟ್ ಟಿ.ವಿ |
| | 23 ಸ್ಮಾರ್ಟ್‌ಬೋರ್ಡ್ |
| | 1,124 ಟ್ಯಾಬ್ಸ್ |
| | ವೈ-ಫೈ ಕ್ಯಾಂಪಸ್ |

- **KYC - Know Your Child** (ನಿಮ್ಮ ಮಗುವಿನ ಪ್ರಗತಿ ತಿಳಿಯಿರಿ): ಪ್ರತಿ ವಿದ್ಯಾರ್ಥಿಯ ಕ್ಷಮತೆ ಮೌಲ್ಯಮಾಪನಕ್ಕಾಗಿ **KYC** ಯೋಜನೆ
- SSLC ಪರೀಕ್ಷಾ ತಯಾರಿಗಾಗಿ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳು, ಅಣಕು ಪರೀಕ್ಷೆಗಳು
- 34 ಅಂಗನವಾಡಿಗಳಲ್ಲಿ 18 ಅಂಗನವಾಡಿಗಳಿಗೆ **ಮಾಂಟೆಸರಿ ಮಾದರಿಯ ಶಿಕ್ಷಣ**
- **Dell Olympiad** ನಲ್ಲಿ ಮಲ್ಲೇಶ್ವರದಿಂದ 142 ವಿದ್ಯಾರ್ಥಿಗಳು ಪಾಲ್ಗೊಂಡಿದ್ದು, 42 ವಿದ್ಯಾರ್ಥಿಗಳು ಪಾರಿತೋಷಕ ಪಡೆದಿರುತ್ತಾರೆ





ಮಲ್ಲೇಶ್ವರ ಶಾಲಾ ಮಾದರಿ (ಎಂಎಸ್ಎಂ) ಪರಿಕಲ್ಪನೆಯ ಅಂಗವಾಗಿ 'ನಿಮ್ಮ ಮಗುವಿನ ಪ್ರಗತಿ ತಿಳಿಯಿರಿ' (ಕೆವೈಸಿ) ಉಪಕ್ರಮವನ್ನು ಎಲ್ಲ ಸರ್ಕಾರಿ ಶಾಲೆಗಳಲ್ಲಿ ಯಶಸ್ವಿಯಾಗಿ ಜಾರಿಗೊಳಿಸಿದ ನಂತರ ಪಾಲಕರಿಗೆ ದೈನಂದಿನ ಆಧಾರದ ಮೇಲೆ ತಮ್ಮ ಮಕ್ಕಳ ಪ್ರಗತಿಯನ್ನು ತಿಳಿಯಲು ಸಾಧ್ಯವಾಗಿದೆ.

NATIONAL MODEL

- ಎಲ್ಲಾ ಪ್ರೌಢಶಾಲೆಗಳಲ್ಲಿ **ಸುಸಜ್ಜಿತ ವಿಜ್ಞಾನ ಪ್ರಯೋಗಾಲಯ**
- 13ನೇ ಕ್ರಾಸ್‌ನ ಪ್ರಾಥಮಿಕ, ಪ್ರೌಢಶಾಲೆ, ಪದವಿ ಪೂರ್ವ ಹಾಗೂ ಪದವಿಯ 3,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ **English Language Lab**
- 18ನೇ ಕ್ರಾಸ್‌ನಲ್ಲಿನ ಪ್ರೌಢಶಾಲೆಯಲ್ಲಿ **ಅಟಲ್ ಟಿಂಕರಿಂಗ್ ಲ್ಯಾಬ್**
- ಸಂತೇಬೀದಿ, 18ನೇ ಅಡ್ಡರಸ್ತೆ ಹಾಗೂ 13ನೇ ಅಡ್ಡರಸ್ತೆಯ ಶಾಲೆಗಳಲ್ಲಿ **3 Science Parks**
- **'ಪುನೀತ್ ಸ್ಯಾಟಲೈಟ್' (KGS3)** ಅಭಿವೃದ್ಧಿ ಹಾಗೂ ನಿರ್ವಹಣೆಯಲ್ಲಿ 18ನೇ ಕ್ರಾಸ್‌ನ ಪ್ರೌಢಶಾಲೆ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ. ಈ ಉಪಗ್ರಹವು ಸರ್ಕಾರಿ ಶಾಲೆಗಳಲ್ಲಿ **'ಸ್ಟೂಡೆಂಟ್ ಸ್ಯಾಟಲೈಟ್ ಪ್ರಾಜೆಕ್ಟ್'** ಅಡಿಯಲ್ಲಿ ತಯಾರಾಗಿದ್ದು, ದೇಶದಲ್ಲೇ ಮೊದಲು ಮತ್ತು ಮಲ್ಲೇಶ್ವರದಲ್ಲಿ ಮಾತ್ರ ಈ ಯೋಜನೆ ಸಾಕಾರಗೊಂಡಿದೆ.
- **Dr. CNA Learning APP** ಮೂಲಕ **CET, NEET, JEE ಪರೀಕ್ಷೆಗೆ ತರಬೇತಿ**
- ಮಲ್ಲೇಶ್ವರದಲ್ಲಿ ಬೆಂಗಳೂರು ನಗರ ವಿ.ವಿಯಿಂದ **ಹೊಸ Multidisciplinary ಮಹಿಳಾ ಪದವಿ ಕಾಲೇಜು ಸ್ಥಾಪನೆ**

ನಮ್ಮ ಮಲ್ಲೇಶ್ವರ
Namma Malleshwara
#ಒದುಮಲ್ಲೇಶ್ವರ

ನಮ್ಮ
ಮಲ್ಲೇಶ್ವರ
Namma
Malleshwara
#ಓದುಮಲ್ಲೇಶ್ವರ

# #ODUMALLESHWARA:



ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ




ವಿದ್ಯಾರ್ಥಿಗಳಿಗೆ ಟ್ಯಾಬ್‌ಗಳ ವಿತರಣೆ




ಶಾಲೆಗಳಿಗೆ ಸ್ಮಾರ್ಟ್ ಟಿ.ವಿ. ವಿತರಣೆ



ಅಂಗನವಾಡಿಗಳಲ್ಲಿ ಮಾಂಟೆಸರಿ ಶಿಕ್ಷಣ




ಆಜಾದಿ ಕಾ ಅಮೃತ ಮಹೋತ್ಸವದ ಆಚರಣೆ ಅಂಗವಾಗಿ ಇಸ್ರೋ ನೆರವಿನಿಂದ, ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಂದ ಪುನೀತ್ ಉಪಗ್ರಹ KGS3 ಎಂಬ ಉಪಗ್ರಹ ಅಭಿವೃದ್ಧಿ. ಇದು ದೇಶದಲ್ಲೇ ಮೊದಲು ಮತ್ತು ಮಲ್ಲೇಶ್ವರದಲ್ಲಿ ಮಾತ್ರ.

ಆಡು ಮಲ್ಲೇಶ್ವರ

ಆಗು ವಿಜಯೀಭವ:

ಕ್ರೀಡಾ ಚಟುವಟಿಕೆಗಳು ಯುವಜನರಲ್ಲಿ ಪ್ರಬಲ ನಾಯಕತ್ವದ ಗುಣಗಳನ್ನು ಬೆಳೆಸುತ್ತವೆ ಎಂದು ಡಾ. ಅಶ್ವತ್ಥ ನಾರಾಯಣ ಅವರು ನಂಬಿಕೊಂಡು ಬಂದಿದ್ದಾರೆ. ಕ್ರೀಡಾ ಚಟುವಟಿಕೆಗಳಿಗೆ **ಸಮರ್ಪಕವಾದ ಮೂಲಸೌಕರ್ಯ**ಗಳೇ ಬೆನ್ನೆಲುಬು ಎಂದು ಅರಿತಿರುವ ಅವರು ಮಲ್ಲೇಶ್ವರದ ಮಕ್ಕಳು ತಮಗೆ ಬೇಕಾದ ಕ್ರೀಡೆಯನ್ನು ಆಯ್ದುಕೊಂಡು ಅದರಲ್ಲಿಯೇ ಪರಿಣತಿ ಸಾಧಿಸಲು ಮತ್ತು ಅದನ್ನೇ ತಮ್ಮ ವೃತ್ತಿಯಾಗಿ ಮಾಡಿಕೊಳ್ಳಲು ನಿರಂತರವಾಗಿ ಶ್ರಮಿಸುತ್ತಿದ್ದಾರೆ.



ಚಂದ್ರಶೇಖರ ಆಜಾದ್ ಮೈದಾನ

# ಕ್ರೀಡೆಯ ಕನಸಿಗೆ ನೀರೆರೆಯುವ ತಾಣ:

ನಮ್ಮ ಮಲ್ಲೇಶ್ವರ™
Namma Malleshwara
#ಆಡುಮಲ್ಲೇಶ್ವರ



- **ಅಂತರರಾಷ್ಟ್ರೀಯ ಮಟ್ಟದ** ಅಥ್ಲೀಟ್‌ಗಳ ತಯಾರಿಗೆ ನೆರವಾಗಬಲ್ಲ ಅದ್ಭುತ ಸೌಕರ್ಯಗಳ **ಕ್ರೀಡಾಂಗಣ**
- 2022 ಅಕ್ಟೋಬರ್ 1 ರಂದು ಉದ್ಘಾಟನೆ
- **183 ಮೀಟರ್ – 5 ಲೇನ್‌ನ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್**
- **ಸಿಂಥೆಟಿಕ್ ವಾಲಿಬಾಲ್** ಮತ್ತು **ಬ್ಯಾಡ್ಮಿಂಟನ್ ಅಂಕಣಗಳು**
- **2 ಕಬಡ್ಡಿ** ಅಂಕಣಗಳು
- **ಲಾಂಗ್ ಜಂಪ್ ರನ್‌ವೇ**
- **500 ಸೀಟ್** ಸಾಮರ್ಥ್ಯದ ಪ್ರೇಕ್ಷಕರ ಗ್ಯಾಲರಿ
- **ಒಳಾಂಗಣ ವಾಲಿಬಾಲ್ ಕೋರ್ಟ್**
- **ಒಳಾಂಗಣ ಜಿಮ್** ಸೌಲಭ್ಯ
- **ಒಲಿಂಪಿಕ್ಸ್ ಕ್ರೀಡಾಪಟು ಪ್ರಮೀಳಾ ಅಯ್ಯಪ್ಪ** ಅವರ ಜತೆ ಅಥ್ಲೆಟಿಕ್ಸ್ ತರಬೇತಿಗಾಗಿ ಒಡಂಬಡಿಕೆ – ಸದ್ಯ 40 ಮಕ್ಕಳಿಗೆ **ಅಥ್ಲೆಟಿಕ್ ತರಬೇತಿ**
- **National Sports Club** ನೊಂದಿಗೆ **ಕಬಡ್ಡಿ ತರಬೇತಿ** ನೀಡಲು ಒಡಂಬಡಿಕೆ
- ವೈಯಾಲಿಕಾವಲ್, 18ನೇ ಕ್ರಾಸ್, ಸುಬ್ರಹ್ಮಣ್ಯನಗರ, ಕೋದಂಡರಾಮಪುರ ಮತ್ತು ಸದಾಶಿವನಗರ ಆಟದ ಮೈದಾನಗಳ ಅಭಿವೃದ್ಧಿ



ಸದಾಶಿವನಗರದಲ್ಲಿ ಭಾರತದ ಮೊದಲ ಪ್ಯಾಡೆಲ್ ಕೋರ್ಟ್





16ನೇ ಅಡ್ಡರಸ್ತೆಯಲ್ಲಿ ಅಭಿವೃದ್ಧಿ ಹಂತದ ಕ್ರೀಡಾ ಸಂಕೀರ್ಣ

## ಸುಂದರ ಮಲ್ಲೇಶ್ವರ

**ಕಣ್ಣನಗಳಿಗೆ ಆನಂದ:**


ಮಲ್ಲೇಶ್ವರವನ್ನು ಒಂದು ಸುಂದರ ಮತ್ತು ಆಕರ್ಷಕ ಕ್ಷೇತ್ರವನ್ನಾಗಿ ರೂಪಿಸುವಲ್ಲಿ ಡಾ. ಅಶ್ವತ್ಥ ನಾರಾಯಣ ಅವರ ಪಾತ್ರ ದೊಡ್ಡದು. ಇಲ್ಲಿನ **ಕೆರೆಗಳು, ಉದ್ಯಾನಗಳು, ದೇವಾಲಯಗಳು** ಮತ್ತು **ಕ್ರೀಡಾಂಗಣಗಳು** ಹೀಗೆ ಅದು ಯಾವುದೇ ಇರಲಿ ಎಲ್ಲವನ್ನೂ ಅವರು **ಆಧುನೀಕರಣಗೊಳಿಸಿ** ಅವುಗಳಿಗೆ **ಹೊಸ ಕಳೆ ತಂದಿದ್ದಾರೆ.** ಆದಾಗ್ಯೂ ಮಲ್ಲೇಶ್ವರವು ತನ್ನ ಹಳೆಯ ವೈಭವ, ಆಕರ್ಷಣೆಯನ್ನು ಹಾಗೆಯೇ ಉಳಿಸಿಕೊಂಡಿದೆ. ಏಕೆಂದರೆ ಇಲ್ಲಿ ಇರುವ ಯಾವುದೇ ಪಾರಂಪರಿಕ ಕಟ್ಟಡಕ್ಕೆ ಯಾವ ಧಕ್ಕೆಯೂ ಆಗಿಲ್ಲ. ಬದಲಿಗೆ ಈ ಕಟ್ಟಡಗಳನ್ನು ಮೂಲ ಸ್ವರೂಪದಲ್ಲಿಯೇ ನವೀಕರಣಗೊಳಿಸಿ ಸಂರಕ್ಷಿಸಲು ಅವರು ಅಗತ್ಯ ಕ್ರಮಗಳನ್ನು ತೆಗೆದುಕೊಂಡಿದ್ದಾರೆ.



ನಮ್ಮ ಮಲ್ಲೇಶ್ವರ
Namma Malleshwara
#ಸುಂದರಮಲ್ಲೇಶ್ವರ

## ಶತಮಾನದ ನೆನಪುಗಳಿಗೆ
# ಜೀವಕಳೆಯ ಸಂಭ್ರಮ:

- ಮೈಸೂರಿನ ದಿವಾನ ಮತ್ತು **ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಥಮ ಅಧ್ಯಕ್ಷರಾಗಿದ್ದ ಎಚ್.ವಿ. ನಂಜುಂಡಯ್ಯ** ಅವರ ಮನೆಯನ್ನು ಮರುಬಳಕೆಗೆ ಸಜ್ಜುಗೊಳಿಸಲಾಗಿದೆ
- **ಈ ಮನೆ 1915** ರಲ್ಲಿ ಮಲ್ಲೇಶ್ವರದ 6ನೇ ಅಡ್ಡರಸ್ತೆಯಲ್ಲಿ ನಿರ್ಮಾಣಗೊಂಡಿತು
- ಈ **ಪಾರಂಪರಿಕ ಹಿರಿಮೆಯ** ಕಟ್ಟಡವನ್ನು ಬಾಲಕಿಯರ ಸರ್ಕಾರಿ ಶಾಲೆಗೆ ಸಮರ್ಪಿಸಲಾಗುವುದು
- ಇದೇ ಕಟ್ಟಡವನ್ನು **ಮಲ್ಲೇಶ್ವರದ ಅಭಿವೃದ್ಧಿ ಚಟುವಟಿಕೆಗಳ ಪ್ರದರ್ಶನಕ್ಕೆ ವಸ್ತು ಸಂಗ್ರಹಾಲಯ**ವಾಗಿಯೂ ಅಭಿವೃದ್ಧಿಪಡಿಸಲಾಗುವುದು



ಶತಮಾನ ಕಂಡ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢಶಾಲೆ ಕಟ್ಟಡದ ಪುನರುಜ್ಜೀವನ ಜಾರಿಯಲ್ಲಿ



ಎಚ್.ವಿ. ನಂಜುಂಡಯ್ಯ ಅವರ ನಿವಾಸಕ್ಕೆ ಡಾ. ಅಶ್ವತ್ಥ ನಾರಾಯಣ ಅವರು ಮೈಸೂರು ರಾಜವಂಶಸ್ಥ ಯದುವೀರ ಒಡೆಯರ್, ಜರ್ಮನಿಯ ಕಾನ್ಸಲ್ ಜನರಲ್ ಅಖಿಮ್ ಬುರ್‌ಕಾರ್ಟ್ ಮತ್ತು ಉಪ ಕಾನ್ಸಲ್ ಜನರಲ್ ಕಾರ್ಲ್ ಫಿಲಿಪ್ ಎಹ್ಲೆರ್‌ಡಿಂಗ್ ಅವರ ಜೊತೆಗೆ ಭೇಟಿ (ಮಾರ್ಚ್ 2021 ರಲ್ಲಿ)



## ಸ್ಯಾಂಕಿ: ಸೌಂದರ್ಯ ಸ್ಪರ್ಶ

# ಮಲ್ಲೇಶ್ವರದ ಜೀವನಾಡಿ ನಾಗರಿಕರ ನಿತ್ಯದ ಒಡನಾಡಿ:

- **ಮಲ್ಲೇಶ್ವರದ ಶ್ವಾಸಕೋಶ ಸ್ಯಾಂಕಿ ಕೆರೆಯ** ಸುಂದರೀಕರಣ ಮತ್ತು ಅಭಿವೃದ್ಧಿ (**Total Environment** ಪ್ರಾಯೋಜನೆ)
- ಪಾರಂಪರಿಕ ಶೈಲಿಯ **ವಿದ್ಯುದ್ದೀಪಗಳೊಂದಿಗೆ Jogging Track** ಹಾಗೂ **Walking Path** ಗಳ ಅಭಿವೃದ್ಧಿ
- **ಏಳು ದಿಕ್ಕುಗಳಿಂದ ಕೆರೆಯೊಳಗೆ ನೀರು** ಸುಗಮವಾಗಿ ಹರಿದು ಬರುವಂತೆ ಸುತ್ತಲಿನ ರಾಜಕಾಲುವೆಗಳ ಅಭಿವೃದ್ಧಿ
- ಕಳೆದ ಮೂರು ವರ್ಷಗಳಿಂದ ಕೆರೆ ತುಂಬಿ ತುಳುಕುತ್ತಿದೆ
- ಉದ್ಯಾನಗಳಿಗೆ **ಆಕರ್ಷಕ** ವಿನ್ಯಾಸ
- ದೇವಾಲಯಗಳಲ್ಲಿ **ಸೃಷ್ಟಿಯಾಗುವ ನಿರ್ಮಾಲ್ಯವನ್ನು ಗೊಬ್ಬರವಾಗಿ** ಪರಿವರ್ತಿಸಿ ಮಾಲಿನ್ಯ ತಡೆಯಲಾಗುತ್ತಿದೆ
- ಪ್ರತಿ ವರ್ಷ ಕ್ಷೇತ್ರದಾದ್ಯಂತ **10,000 ಸಸಿಗಳ** ಹಂಚಿಕೆ
- ಎಲ್ಲ ಉದ್ಯಾನಗಳಲ್ಲಿ **ಸಮರ್ಪಕ ಉಸ್ತುವಾರಿ**



ಶ್ರೀ ವೇಣುಗೋಪಾಲಸ್ವಾಮಿ ದೇವಾಲಯದಲ್ಲಿ ಜೀರ್ಣೋದ್ಧಾರಗೊಂಡ ಕಲ್ಯಾಣಿ ಉದ್ಘಾಟನೆ ಸಮಯದಲ್ಲಿ ಡಾ. ಅಶ್ವತ್ಥ ನಾರಾಯಣ ಅವರು ಪೂಜೆ ನೆರವೇರಿಸಿದರು

ನಮ್ಮ™ ಮಲ್ಲೇಶ್ವರ
Namma Malleshwara
#ಸುಂದರಮಲ್ಲೇಶ್ವರ

Saukarya
Malleshwara

ಭವ್ಯ ಭವಿಷ್ಯಕ್ಕಾಗಿ ಭದ್ರ ಬುನಾದಿ:

ಡಾ. ಅಶ್ವತ್ಥ ನಾರಾಯಣ ಅವರಿಗೆ ಭವಿಷ್ಯದ ಮಲ್ಲೇಶ್ವರ ಹೇಗಿರಬೇಕು ಎಂದು ತಿಳಿದಿದೆ. ಅದಕ್ಕೆ ಪೂರಕವಾಗಿ ಅವರು ಇಲ್ಲಿ ಎಲ್ಲ ಮೂಲಸೌಕರ್ಯಗಳನ್ನು ಒದಗಿಸುವ ಮೂಲಕ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕಂಕಣ ತೊಟ್ಟಿದ್ದಾರೆ. ಹೀಗಾಗಿ ಇಂದು ಮಲ್ಲೇಶ್ವರ ಒಂದು ಮಾದರಿ ಕ್ಷೇತ್ರ ಎನಿಸಿದೆ. ಇದು ಕೇವಲ ಬೆಂಗಳೂರಿಗೆ ಮಾತ್ರವಲ್ಲ, ಕ್ಷೇತ್ರವಿದ್ದರೆ ಹೀಗಿರಬೇಕು ಎಂಬ ಮಾತು ರಾಜ್ಯದಾದ್ಯಂತ ಕೇಳಿಬರುತ್ತಿದೆ. ಹಾಗೂ ಎಲ್ಲ ಕಡೆ **ಮಲ್ಲೇಶ್ವರದ ಮಾದರಿ**ಯನ್ನು ಅಳವಡಿಸಲಾಗುತ್ತಿದೆ ಮತ್ತು ಅನುಸರಿಸಲಾಗುತ್ತಿದೆ.



## ಮಲ್ಲೇಶ್ವರದ
# ಜೀವನಾಡಿಗಳ ಅಭಿವೃದ್ಧಿ:



ಮಾರ್ಗೋಸಾ, ಸಂಪಿಗೆ, ಸಿ.ವಿ. ರಾಮನ್, ಕೆನರಾ ಯೂನಿಯನ್ ರಸ್ತೆಗಳನ್ನು ಟೆಂಡರ್ ಶ್ಯೂರ್ ಮತ್ತು ವೈಟ್ ಟಾಪಿಂಗ್ ಯೋಜನೆಗಳ ಅಡಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ

## ಬಿಬಿಎಂಪಿ:

| ರಸ್ತೆ/ಡ್ರೇನ್/ಫುಟ್ ಪಾತ್ (KM ನಲ್ಲಿ) | | | |
|---|---|---|---|
| **ಕಾಮಗಾರಿ** | **ಗುರಿ** | **ಗುರಿ ಸಾಧನೆ** | **ಕಾಮಗಾರಿ ಪ್ರಗತಿಯಲ್ಲಿ** |
| ರಸ್ತೆ ಜಾಲ ನಿರ್ಮಾಣ | 257.7 | 222.2 | 35.5 |
| ಮುಖ್ಯ ರಸ್ತೆಗಳು | 35.7 | 31.5 | 4.2 |
| ಇಂಟರ್‌ಮೀಡಿಯೆಟ್ ರಸ್ತೆಗಳು | 23.4 | 22.3 | 1.1 |
| ಮೈನರ್ ರೋಡ್ – ಡಾಂಬರೀಕರಣ | 168.45 | 148.45 | 20 |
| ಮೈನರ್ ರೋಡ್ – ಕಾಂಕ್ರೀಟ್ | 30.15 | 19.95 | 10.20 |
| ಮಳೆ ನೀರಿನ ಡ್ರೇನ್ ಸಂಪರ್ಕ | 317.76 | 189.55 | 128.21 |
| ಪಾದಚಾರಿ ರಸ್ತೆಗಳು | 71.85 | 60.61 | 11.24 |

## ಬೃಹತ್ ಮಳೆ ನೀರುಗಾಲುವೆ ದುರಸ್ತಿ ಕಾಮಗಾರಿ:

| ಪ್ಯಾಕೇಜ್ 1 | ಗುರಿ ಸಾಧನೆ |
|---|---|
| ಅನುಮೋದಿತ ಒಟ್ಟು ಉದ್ದ | 4.12 KM |
| ಪೂರ್ಣಗೊಂಡಿರುವುದು | 3 KM |
| ಪ್ರಗತಿಯಲ್ಲಿ | 1.12 KM |

| ಪ್ಯಾಕೇಜ್ 2 | ಗುರಿ ಸಾಧನೆ |
|---|---|
| ಅನುಮೋದಿತ ಒಟ್ಟು ಉದ್ದ | 1.8 KM |
| ಪೂರ್ಣಗೊಂಡಿರುವುದು | 0.45 KM |
| ಪ್ರಗತಿಯಲ್ಲಿ | 1.35 KM |

ವಿದ್ಯುದ್ದೀಕರಣ

# ಸುರಕ್ಷತೆಗೆ ಮೊದಲ ಮಣೆ:

- ಮಲ್ಲೇಶ್ವರದಲ್ಲಿ **ಭಾರತದ ಪ್ರಥಮ ಭೂಮಿಯಡಿ (500 ಕೆ.ವಿ.) ಟ್ರಾನ್ಸ್‌ಫಾರ್ಮರ್ ಅಳವಡಿಕೆ**
- ಇದರಿಂದಾಗಿ **ವಿದ್ಯುತ್ ಸಂಬಂಧಿ ಅಪಘಾತ ತಡೆಯಬಹುದು** ಹಾಗೂ ವಿದ್ಯುಚ್ಛಕ್ತಿ ಸಂಪರ್ಕ ಕಡಿತವಾಗುವುದನ್ನು ತಪ್ಪಿಸಬಹುದು.
- ನ್ಯೂ ಬಿಇಎಲ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಇದ್ದ ಟ್ರಾನ್ಸ್‌ಫಾರ್ಮರ್‌ಗಳನ್ನು **ಜನರ ಸುಗಮ ಸಂಚಾರಕ್ಕೆ** ಅನುವು ಮಾಡಲು ಸ್ಥಳಾಂತರ
- ಎಲ್ಲ ಮುಖ್ಯ ರಸ್ತೆಗಳಲ್ಲಿ **ಭೂಮಿಯಡಿ ಕೇಬಲ್ ಮತ್ತು ಬೀದಿದೀಪಗಳ ಅಳವಡಿಕೆ**
- ಶಿಥಿಲ ವಿದ್ಯುತ್ ಕಂಬಗಳ ಬದಲಾವಣೆ ಹಾಗೂ ಸ್ಥಳಾಂತರ

NATIONAL MODEL

ನಮ್ಮ™ ಮಲ್ಲೇಶ್ವರ
Namma Malleshwara
#ಸೌಕರ್ಯಮಲ್ಲೇಶ್ವರ



ಭೂಮಿಯಡಿ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾರ್ಯ ಪ್ರಗತಿಯಲ್ಲಿ

ನಮ್ಮ ಮಲ್ಲೇಶ್ವರ

Namma Malleshwara

#ಸೌಕರ್ಯಮಲ್ಲೇಶ್ವರ



ಪಾದಚಾರಿ ರಸ್ತೆ ಮೇಲಿನ ತೆರೆದ ಟ್ರಾನ್ಸ್‌ಫಾರ್ಮರ್‌ಗಳನ್ನು ತೆಗೆದು ಸುರಕ್ಷಿತ ಹಾಗೂ ಸಂಪೂರ್ಣ ಮುಚ್ಚಿದ ಟ್ರಾನ್ಸ್‌ಫಾರ್ಮರ್ ಅಳವಡಿಕೆ



ಸಾಂಪ್ರದಾಯಿಕ ಟ್ರಾನ್ಸ್‌ಫಾರ್ಮರ್‌ಗಳನ್ನು ತೆಗೆದು ವಿಶೇಷವಾಗಿ ವಿನ್ಯಾಸಗೊಳಿಸಿದ ಸ್ಪನ್ ಪೋಲ್ ಹೈ-ರೈಸ್ ಟ್ರಾನ್ಸ್‌ಫಾರ್ಮರ್‌ಗಳ ಅಳವಡಿಕೆ



ಭವಿಷ್ಯದಲ್ಲಿ ಕೇಬಲ್ ಅಳವಡಿಕೆಗೆ ಅನುವು ಮಾಡುವಂತೆ ಮೂರು ಹೆಚ್ಚುವರಿ ಖಾಲಿ ಡಕ್ಟ್‌ಗಳ ನಿರ್ಮಾಣ



ಇಂಟರ್‌ನೆಟ್ ಮತ್ತು ಬ್ರಾಡ್‌ಬ್ಯಾಂಡ್ ಸೇವಾ ಪೂರೈಕೆದಾರರು ಎಲ್ಲ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳಲ್ಲಿ ಓಎಫ್‌ಸಿ ಕೇಬಲ್‌ಗಳನ್ನು ಅಳವಡಿಸಿದ್ದಾರೆ

## ಬೆಸ್ಕಾಂ:

| ಕಾಮಗಾರಿ | ಗುರಿ ಸಾಧನೆ |
|---|---|
| ಪೋಲ್ ಮೌಂಟೆಡ್ ಟ್ರಾನ್ಸ್‌ಫಾರ್ಮರ್ ತೆಗೆದು ಹೈ ಮೌಂಟೆಡ್ ಟ್ರಾನ್ಸ್‌ಫಾರ್ಮರ್‌ಗಳ ಅಳವಡಿಕೆ | 245 |
| ಪೋಲ್ ಮೌಂಟೆಡ್ ಟ್ರಾನ್ಸ್‌ಫಾರ್ಮರ್ ತೆಗೆದು ಸೇಫ್ ಕಾಂಪ್ಯಾಕ್ಟ್ ಟ್ರಾನ್ಸ್‌ಫಾರ್ಮರ್‌ಗಳ ಅಳವಡಿಕೆ | 19 |
| ಓವರ್ ಹೆಡ್ ಕೇಬಲ್‌ಗಳನ್ನು ತೆಗೆದು ಭೂಮಿಯಡಿ ಕೇಬಲ್ ಅಳವಡಿಕೆ | 149.7 KM |
| ಓವರ್ ಹೆಡ್ ಕೇಬಲ್‌ಗಳನ್ನು ತೆಗೆದು ಏರಿಯಲ್ ಬಂಚ್ಡ್ ಕೇಬಲ್ ಅಳವಡಿಕೆ | 104 KM |

## ಓಎಫ್‌ಸಿ ಕಾಮಗಾರಿ:

| ಕಾಮಗಾರಿ | ಗುರಿ ಸಾಧನೆ |
|---|---|
| ಎಲ್ಲ ಪ್ರಮುಖ ರಸ್ತೆಗಳಲ್ಲಿ ACT Fibernet, Airtel, BSNL, Jio & BESCOM ಓಎಫ್‌ಸಿ ಅಳವಡಿಕೆ | 250 KM |

ನಮ್ಮ ಮಲ್ಲೇಶ್ವರ
Namma Malleshwara
#ಸೌಕರ್ಯಮಲ್ಲೇಶ್ವರ

# ಮಲ್ಲೇಶ್ವರದ
# ಜೀವನಾಡಿಗಳ ಅಭಿವೃದ್ಧಿ:




## BWSSB:

| ಕಾಮಗಾರಿ | ಗುರಿ ಸಾಧನೆ |
|---|---|
| ಒಟ್ಟು ಬಿಡಬ್ಲ್ಯುಎಸ್‌ಎಸ್‌ಬಿ ವಾಟರ್ ಲೈನ್ | 258.36 KM |
| ಯುಎಫ್‌ಡಬ್ಲ್ಯು ಅಡಿ ಬದಲಿಸಿದ ಪೈಪ್‌ಲೈನ್ | 192.165 KM |
| ಉತ್ತಮ ಸ್ಥಿತಿಯಲ್ಲಿ ಇರುವ ಉಳಿದ ಪೈಪ್‌ಲೈನ್ | 66.55 KM |
| ಯುಎಫ್‌ಡಬ್ಲ್ಯು ಅಡಿ ಬದಲಿಸಿದ ಗೃಹಬಳಕೆ ಸಂಪರ್ಕಗಳು | 33,000+ |
| ಸ್ಯಾನಿಟರಿ ಲೈನ್ ಬದಲಾವಣೆ | 29 KM |

## ಮ್ಯಾನ್‌ಹೋಲ್ಸ್:

| ಕಾಮಗಾರಿ | ಗುರಿ ಸಾಧನೆ |
|---|---|
| ಪುನರ್ ನಿರ್ಮಿಸಿದ ಮ್ಯಾನ್ ಹೋಲ್ | 1,800 |
| ಆರ್‌ಸಿಸಿ ಪ್ರೀಕ್ಯಾಸ್ಟ್ ಮ್ಯಾನ್‌ಹೋಲ್ | 1,200 |
| ಇಟ್ಟಿಗೆ ಬಳಸಿ ಕಟ್ಟಿದ ಮ್ಯಾನ್‌ಹೋಲ್ | 600 |



ರಸ್ತೆಗಳ ಕುಸಿತ ತಡೆಯಲು ಅತಿ ಹೆಚ್ಚು ಸಂಖ್ಯೆಯಲ್ಲಿ ಮ್ಯಾನ್‌ಹೋಲ್‌ಗಳು ಮತ್ತು ಒಳಚರಂಡಿಗಳ ನಿರ್ಮಾಣ

**2013 ರಲ್ಲಿ** ಶೇಕಡ 45.71 ರಷ್ಟು ನೀರು ಪೋಲು

**2021 ರ ಮೇ** ವೇಳೆಗೆ ಇದು ಶೇಕಡ 25.3 ಕ್ಕೆ ಇಳಿಕೆ

**2022 ಡಿಸೆಂಬರ್** ವೇಳೆಗೆ ಅದು ಕೇವಲ ಶೇಕಡ 14.72 ಕ್ಕೆ ಇಳಿಕೆ.

- **ಯುಎಫ್‌ಡಬ್ಲ್ಯು (UFW - Unaccounted-For Water)** ಯೋಜನೆ ಅಡಿಯಲ್ಲಿ **33,000 ಮನೆಗಳಿಗೆ ನಲ್ಲಿ ನೀರು ಪೂರೈಕೆ**
- ಕ್ಷೇತ್ರದ ನೀರು ಪೂರೈಕೆ ಮತ್ತು ಒಳಚರಂಡಿ ಪೈಪ್ ಲೈನ್‌ಗಳು **70 ವರ್ಷ ಹಳೆಯವು.** ಅವುಗಳನ್ನು ಇದೇ ಮೊದಲು ಬದಲಿಸಲಾಗಿದ್ದು **ಇನ್ನು 50 ವರ್ಷ ಈ ಲೈನ್‌ಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತವೆ**
- **265 ಕಿ.ಮೀ. ಗಿಂತ ಹೆಚ್ಚು ಪೈಪ್‌ಲೈನ್** ಅಳವಡಿಕೆ. ಶೇಕಡ 85 ರಷ್ಟು ಕೆಲಸ ಪೂರ್ಣ
- **110 ಕಿ.ಮೀ.** ದೂರದಿಂದ ನೀರು ತಂದು **180 ಮೀಟರ್‌ನಷ್ಟು ಎತ್ತರದ ಪ್ರದೇಶಗಳಿಗೆ ಪೂರೈಕೆ**
- **ಮೇಲು ಮಹಡಿಯ ಮನೆಗಳಿಗೂ ಅಡಚಣೆಯಿಲ್ಲದೆ ನೀರು ಪೂರೈಕೆ**
- ಟ್ರಂಕ್‌ಲೈನ್, ಫೀಡರ್ ಲೈನ್ ಜಿಎಲ್‌ಆರ್‌ಗಳ ಪುನರ್‌ಸ್ಥಾಪನೆ

## ಮಲ್ಲೇಶ್ವರ ಸಹಾಯ 2.0:

ಡಾ. ಅಶ್ವತ್ಥ ನಾರಾಯಣ ಅವರಿಗೆ ಆಧುನಿಕ ಜೀವನದ ಅವಿಭಾಜ್ಯ ಅಂಗವಾಗಿರುವ ತಂತ್ರಜ್ಞಾನ ಎಂದರೆ ಅಷ್ಟೇ ಇಷ್ಟ. ಅವರು ತಮ್ಮ ಕ್ಷೇತ್ರದ ಅಭಿವೃದ್ಧಿ ಯೋಜನೆಗಳಲ್ಲಿ ಏನೆಲ್ಲ ತಂತ್ರಜ್ಞಾನ ಬಳಸಬೇಕು, ಏನೆಲ್ಲ ನಾವೀನ್ಯಪೂರ್ಣ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು ಎಂಬುದರ ಕುರಿತು ಸದಾ ಆಲೋಚನೆ ಮಾಡುತ್ತಾ ಇರುತ್ತಾರೆ. ತಮ್ಮ ಕ್ಷೇತ್ರದ ಜನರ ಜತೆಗೆ ಸತತವಾಗಿ ಸಂಪರ್ಕದಲ್ಲಿ ಇರಲು, ಸಂವಾದ ಮಾಡಲು ಅವರು ತಂತ್ರಜ್ಞಾನವನ್ನು ಬಳಸಿಕೊಳ್ಳುವ ಹಾಗೆಯೇ ಪರಿಣಾಮಕಾರಿ **ನಾಗರಿಕ ಕುಂದುಕೊರತೆ ಪರಿಹಾರ ವೇದಿಕೆ & GIS** ಸಮರ್ಥವಾಗಿ ಬಳಸಿಕೊಂಡು ಜನರ ಸುರಕ್ಷತೆಗೆ ಕ್ರಮಗಳನ್ನೂ ತೆಗೆದುಕೊಂಡಿದ್ದಾರೆ.

**9945 100 200**

ನಂಬರ್‌ಗೆ ವಾಟ್ಸ್ ಆಪ್ ಕರೆ ಮಾಡುವ ಮೂಲಕ ದೂರು ಸಲ್ಲಿಸಲು ಅವಕಾಶ



To report grievances physically, visit: #97/2, 4th Main, 11th Cross, Next to BP Indian School Malleshwara





ಸಾರ್ವಜನಿಕರ ಅನುಕೂಲಕ್ಕಾಗಿ ಪಾದಚಾರಿ ರಸ್ತೆಗಳ ಅಗಲ ಹೆಚ್ಚಳ. ಪಾದಚಾರಿ ರಸ್ತೆಗಳ ಮೇಲೆ ವಾಹನ ನಿಲುಗಡೆ ತಡೆಯಲು ವ್ಯವಸ್ಥೆ



ಮಲ್ಲೇಶ್ವರದ ಮೊದಲ Skywalk ಎಸ್ಕಲೇಟರ್ ಸೌಲಭ್ಯ

## ಸುರಕ್ಷಿತ ಮಲ್ಲೇಶ್ವರ:

ಡಾ. ಅಶ್ವತ್ಥ ನಾರಾಯಣ ಅವರು ಮಲ್ಲೇಶ್ವರವನ್ನು ಒಂದು ಸುರಕ್ಷಿತ ತಾಣವಾಗಿ ಮಾಡಲು ಸಾಕಷ್ಟು ಒತ್ತು ಕೊಟ್ಟಿದ್ದಾರೆ. ಮಲ್ಲೇಶ್ವರವನ್ನು ಮಹಿಳೆಯರಿಗೆ ಸುರಕ್ಷಿತ ಪ್ರದೇಶವಾಗಿರಿಸಲು **'Malleshwara Eye'** ಜಾರಿಗೊಳಿಸಿದ್ದಾರೆ. ಕ್ಷೇತ್ರದ ಎಲ್ಲ ಕಡೆ **ಸಿ.ಸಿ.ಟಿ.ವಿ ಕ್ಯಾಮರಾ**ಗಳನ್ನು ಅಳವಡಿಸಲಾಗಿದೆ. ಇದಕ್ಕಾಗಿ **'ನಿರ್ಭಯ' ಯೋಜನೆ**ಯಡಿ ಲಭ್ಯವಿದ್ದ ಹಣವನ್ನು ಬಳಸಲಾಗಿದೆ. ಬೇಕಾಬಿಟ್ಟಿ ತಾಜ್ಯ ಎಸೆಯುವುದನ್ನು ತಡೆಯಲು ಮತ್ತು ಅಡ್ಡಾದಿಡ್ಡಿ ವಾಹನ ಓಡಿಸುವುದನ್ನು ತಡೆಯಲು ಈ ಕ್ಯಾಮರಾಗಳು ನೆರವಾಗುತ್ತಿವೆ. ಸಾರ್ವಜನಿಕ ಶೌಚಾಲಯಗಳನ್ನು ಮತ್ತು ಪಾದಚಾರಿ ರಸ್ತೆಗಳನ್ನು ಸುಸ್ಥಿತಿಯಲ್ಲಿ ಇಡಲು ಸತತವಾಗಿ ಕ್ರಮ ತೆಗೆದುಕೊಳ್ಳಲಾಗಿದೆ.



# ಸಮೂಹ ವಸತಿ ಯೋಜನೆಗಳು:

| ಸ್ಥಳ | ಒಟ್ಟು ಮನೆಗಳು |
|---|---|
| ಕರಿಮಂಡಿ | 36 |
| ಸರ್ದಾರ್ ವಲ್ಲಭಭಾಯಿ ಪಟೇಲ್ | 33 |
| ಬಿ.ಎಚ್ ಕಾಲೋನಿ | 104 |
| ಎ.ಎನ್.ಎನ್ ಬ್ಲಾಕ್ | 28 |
| ದೋಭಿ ಘಾಟ್ | 192 |
| ಸ್ವಂತ ಸೂರು ಯೋಜನೆ | 404 |
| **ಒಟ್ಟು ಮನೆಗಳು** | **797** |





ಬಿ.ಎಚ್. ಕಾಲೋನಿ ಸಮೂಹ ವಸತಿ ಯೋಜನೆ

# ಇಂಗುಗುಂಡಿಗಳು:

| ಮಲ್ಲೇಶ್ವರದಲ್ಲಿ ರೀಚಾರ್ಜ್ ಪಿಟ್‌ಗಳ ನಿರ್ಮಾಣ | |
|---|---|
| **ವಾರ್ಡ್** | **ಪಿಟ್‌ಗಳ ನಿರ್ಮಾಣ** |
| ಅರಮನೆ ನಗರ | 255 |
| ಮತ್ತಿಕೆರೆ | 276 |
| ಮಲ್ಲೇಶ್ವರ | 224 |
| ರಾಜಮಹಲ್ ನಗರ | 159 |
| ಕಾಡು ಮಲ್ಲೇಶ್ವರ | 16 |
| ಸುಬ್ರಮಣ್ಯ ನಗರ | 296 |
| ಗಾಯತ್ರಿ ನಗರ | 205 |
| **ಒಟ್ಟು** | **1,431** |



ರೀಚಾರ್ಜ್ ಪಿಟ್‌ಗಳ ನಿರ್ಮಾಣ

## ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
# ದೊಡ್ಡ ಪ್ರಮಾಣದಲ್ಲಿ ತಡೆದ ಸೋರಿಕೆ:





ಪಂಪ್ ಹೌಸ್, ವಸ್ತು ಸಂಗ್ರಹಾಲಯ ಮತ್ತು ಸೆಂಟ್ರಲ್ ಪ್ಲಾಝಾ ಒಳಗೊಂಡ ಬಿಡಬ್ಲ್ಯುಎಸ್‌ಎಸ್‌ಬಿ ವಸ್ತು ಸಂಗ್ರಹಾಲಯ ಸ್ಥಾಪನೆಗೆ ಸಿದ್ಧತೆ. ಇದು ಒಟ್ಟು ಬೆಂಗಳೂರಿನ ನೀರು ಪೂರೈಕೆಯ ಚಿತ್ರಣ ಕೊಡುವ ಏಕೈಕ ವಸ್ತು ಸಂಗ್ರಹಾಲಯವಾಗಲಿದೆ

## ಯಶವಂತಪುರ **ಮಾರುಕಟ್ಟೆ:**

- ಯಶವಂತಪುರದ **Flower Market** ಇರುವ **ಮೊದಲ ಮುಖ್ಯರಸ್ತೆಯಲ್ಲಿ ಮಾರುಕಟ್ಟೆ ನಿರ್ಮಾಣ**
- **20,565** ಚದರ ಅಡಿ ಜಾಗ ಬಳಕೆ
- ತಳಮಹಡಿಯಲ್ಲಿ ಹಲವು ಹಂತಗಳ ಪಾರ್ಕಿಂಗ್ ವ್ಯವಸ್ಥೆ. ಇಲ್ಲಿ **56 ಕಾರುಗಳು** ಮತ್ತು **35 ದ್ವಿಚಕ್ರ ವಾಹನಗಳ** ನಿಲುಗಡೆಗೆ ಅವಕಾಶ
- ನೆಲಮಹಡಿಯಲ್ಲಿ ಹೂ ಮತ್ತು ತರಕಾರಿ ಮಾರಾಟಕ್ಕೆ **45 ಮಳಿಗೆಗಳು**
- **ಮೊದಲ ಮಹಡಿಯಲ್ಲಿ ಶೈತ್ಯಾಗಾರ**
- ಕಾಮಗಾರಿ ಮುಕ್ತಾಯ ಹಂತದಲ್ಲಿ



ಕಲಾವಿದನ ಪರಿಕಲ್ಪನೆಯಲ್ಲಿ ಯಶವಂತಪುರದ ಮಾರುಕಟ್ಟೆ

ನಮ್ಮ ಮಲ್ಲೇಶ್ವರ
Namma Malleshwara
#ಸೌಕರ್ಯಮಲ್ಲೇಶ್ವರ

ಮಲ್ಲೇಶ್ವರ
# ಅಂತರರಾಷ್ಟ್ರೀಯ ಕೇಂದ್ರ:


ಕಲಾವಿದನ ಪರಕಲ್ಪನೆಯಲ್ಲಿ ಎಮ್‌ಐಸಿ

- **ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ)** ಮಾದರಿಯಲ್ಲಿ ಒಂದು **ಸಮುದಾಯ ಕೇಂದ್ರ** ಮಂಜೂರು
- ಮಾರ್ಗೋಸಾ ರಸ್ತೆಯ **ಬಿಡಬ್ಲ್ಯುಎಸ್‌ಎಸ್‌ಬಿ ಕಚೇರಿ** ಪಕ್ಕದಲ್ಲಿ, **ಸರ್ಕಾರಕ್ಕೆ ಸೇರಿದ 16,256 ಚದರ ಅಡಿ ಜಾಗದಲ್ಲಿ** ಈ ಕೇಂದ್ರ ತಲೆ ಎತ್ತಲಿದೆ. ಯೋಜನೆ ಪ್ರಗತಿಯಲ್ಲಿ
- ತಳಮಹಡಿಯಲ್ಲಿ **350 ಆಸನಗಳ ಸಭಾಂಗಣ;** ನೆಲಮಹಡಿಯಲ್ಲಿ **ಆಡಳಿತ ಕಚೇರಿ, ಕೆಫೆ** ಮತ್ತು **ಓಪನ್ ಸಭಾಂಗಣಗಳು;** ಮೊದಲ ಮಹಡಿಯಲ್ಲಿ **ಸೆಮಿನಾರ್ ಹಾಲ್, ಗ್ರಂಥಾಲಯ** ಮತ್ತು **ಓಪನ್ ಸಭಾಂಗಣ;** ತಾರಸಿಯಲ್ಲಿ **ಆರ್ಟ್ ಸ್ಟುಡಿಯೊ** ಮತ್ತು **ಉದ್ಯಾನ**
- **Total Environment** ನಿಂದ ವಿನ್ಯಾಸ

ನಮ್ಮ ಮಲ್ಲೇಶ್ವರ
Namma Malleshwara
#ಸೌಕರ್ಯಮಲ್ಲೇಶ್ವರ

BENGALURU MODEL

## ನವೀಕರಣಗೊಂಡ **ದೋಭಿಘಾಟ್:**

- **ಬೆಂಗಳೂರಿನ ಅತ್ಯಂತ ದೊಡ್ಡ ದೋಭಿಘಾಟ್** ನಿರ್ಮಾಣವಾಗಿ ಈಗ 14 ವರ್ಷ
- ಕರ್ನಾಟಕದ ಪ್ರಥಮ **ಆಧುನಿಕ ಸೌಲಭ್ಯಗಳ ದೋಭಿಘಾಟ್** ಎಂದು ಇದೀಗ ಪ್ರಸಿದ್ಧ
- **ಆಧುನಿಕ ಉಪಕರಣ ಮತ್ತು ಸೌಲಭ್ಯಗಳೊಂದಿಗೆ** ದೋಭಿಘಾಟ್ ನವೀಕರಣ
- **Washing Machine, Hydro Extractor, Dryers, ಬಾಯ್ಲರ್ಸ್** ಮತ್ತು **ಕ್ಯಾಲೆಂಡರ್ ಐರನಿಂಗ್ ಮಷಿನ್‌ಗಳು**
- **400 ಕುಟುಂಬಗಳಿಗೆ** ಅನುಕೂಲ



ಉದ್ಯೋಗ ಮಲ್ಲೇಶ್ವರ

ದುಡಿಯುವ ಕೈಗಳಿಗೆ ಅವಕಾಶ:

ಡಾ. ಅಶ್ವತ್ಥ ನಾರಾಯಣ ಅವರು ಕಲಿಕೆ ಮತ್ತು ಕೌಶಲ್ಯಗಳು ಜೊತೆಜೊತೆಯಲ್ಲಿ ಸಾಗುತ್ತವೆ ಎಂದು ಬಲವಾಗಿ ನಂಬಿರುತ್ತಾರೆ. ಕೈಗಾರಿಕೆ ಮತ್ತು ಉದ್ಯಮಗಳಿಗೆ ಬೇಕಾದ ಸ್ಕಿಲ್‌ಗಳನ್ನು ಅಭಿವೃದ್ಧಿ ಪಡಿಸಬೇಕಾದ ಅಗತ್ಯವನ್ನು ಅವರು ಬಹಳ ಹಿಂದೆಯೇ ಮನಗಂಡವರು. ಎಲ್ಲರೂ ಜೀವನೋಪಾಯ ಗಳಿಸಲು ಅನುಕೂಲವಾಗುವಂತೆ **ಸ್ಕಿಲ್ ಕನೆಕ್ಟ್ ಪೋರ್ಟಲ್** ಅನ್ನು ಮರುರೂಪಿಸಿದ್ದಾರೆ. ಯುವಜನತೆಗೆ ಸೂಕ್ತವಾದ ಕೌಶಲ್ಯಗಳ ತರಬೇತಿ ಕೊಟ್ಟರೆ ಅವರು ಬೆಂಗಳೂರನ್ನು ಮಾನವ ಸಂಪನ್ಮೂಲ ರಾಜಧಾನಿಯಾಗಿ ಮಾಡಬಲ್ಲರು ಎಂದು ಅವರು ಪ್ರತಿಪಾದಿಸುತ್ತಾರೆ.



## ಉದ್ಯೋಗ ಮೇಳಗಳು
# ಮತ್ತು ಕೌಶಲ್ಯಾಭಿವೃದ್ಧಿ:

- **ವಿಪ್ರೊ, ಫ್ಯೂಚರ್ ಗ್ರೂಪ್, ಶಾಪರ್ಸ್ ಸ್ಟಾಪ್, ಯುನಿಸಿಸ್, ಐಸಿಐಸಿಐ, ಫರ್ಸ್ಟ್ ಸೋರ್ಸ್, ಟೀಮ್‌ಲೀಸ್** ಮುಂತಾದ ಕಂಪನಿಗಳ ಸಹಯೋಗದೊಂದಿಗೆ ಉದ್ಯೋಗ ಮೇಳ ಆಯೋಜಿಸಲಾಗಿದೆ
- **ಹೊಲಿಗೆ, ಮೂಲಭೂತ ಕಂಪ್ಯೂಟರ್ ಜ್ಞಾನ, ಕಾರ್ಪೆಂಟರಿ** ಇತ್ಯಾದಿ **ವೃತ್ತಿ** ಮತ್ತು **ಕೌಶಲ್ಯಗಳ ತರಬೇತಿ**
- ಜಾಗತಿಕ ಮಹತ್ವದ ವಿಷಯಗಳು ಮತ್ತು ಭವಿಷ್ಯದ ಔದ್ಯೋಗಿಕ ಸವಾಲುಗಳ ಕುರಿತು ಔದ್ಯಮಿಕ ವಲಯದ **ವೃತ್ತಿಪರ ಪರಿಣತರಿಂದ ಮಾಹಿತಿ ವಿನಿಮಯ**
- ಯುವಕರಿಗೆ ಉಚಿತವಾಗಿ ಉದ್ಯೋಗ ಅವಕಾಶಗಳನ್ನು ಕಲ್ಪಿಸಲು ಮತ್ತು ಅವರ ಕೌಶಲ್ಯಗಳನ್ನು ಉನ್ನತೀಕರಿಸಲು **ಮಲ್ಲೇಶ್ವರ ಸ್ಕಿಲ್ ಸೆಂಟರ್** ಅನ್ನು ಸ್ಥಾಪಿಸಲಾಗಿದೆ

ನಮ್ಮ™ ಮಲ್ಲೇಶ್ವರ
Namma Malleshwara
#ಉದ್ಯೋಗಮಲ್ಲೇಶ್ವರ

NATIONAL MODEL



ಮಲ್ಲೇಶ್ವರದ ನಾರಾಯಣ ಟ್ರೈನಿಂಗ್ ಸರ್ವಿಸಸ್‌ನಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ಕೌಶಲ್ಯ ತರಬೇತಿ



ಶಾಲೆಗಳಲ್ಲಿ ಸ್ಥಾಪಿಸಿರುವ ಭಾಷಾ ಪ್ರಯೋಗಾಲಯಗಳು (Language Lab) ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆಯಲ್ಲಿ ಸಂವಾದ ಮತ್ತು ಅಧ್ಯಯನ ಮಾಡಲು ಉಪಯುಕ್ತವಾಗಿವೆ



ಉದ್ಯೋಗ ಮೇಳ – ಮಲ್ಲೇಶ್ವರ ಪ್ರಥಮ ದರ್ಜೆ ಕಾಲೇಜು

# ಉನ್ನತ ಶಿಕ್ಷಣಕ್ಕೆ
# ಅತ್ಯುನ್ನತ ತಾಣ – ಕರ್ನಾಟಕ:



ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಮೈಸೂರು ವಿ.ವಿ ಸಹಯೋಗದಲ್ಲಿ 2022 ರ ಆಗಸ್ಟ್ 11 ರಂದು ನಡೆದ ಅದ್ದೂರಿ ಯುವಜನ ಮಹೋತ್ಸವದ ಉದ್ಘಾಟನೆ

- ಭವಿಷ್ಯದ ಅಗತ್ಯಕ್ಕೆ ಯುವಕರನ್ನು ಸಿದ್ಧಗೊಳಿಸಲು ಕ್ರಾಂತಿಕಾರಿ ಬದಲಾವಣೆಗಳನ್ನು ತರುವ **NEP 2020 ಜಾರಿಗೆ ತಂದ ಮೊದಲ ರಾಜ್ಯ**
- **Karnataka LMS:** ದೇಶದಲ್ಲಿಯೇ ಮೊದಲ **Comprehensive Learning Management System** ಅನುಷ್ಠಾನ – **5 ಲಕ್ಷ ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರತಿ ಸೆಮಿಸ್ಟರ್‌ಗೆ 2.5 ಲಕ್ಷಕ್ಕೂ ಹೆಚ್ಚು ಕಂಟೆಂಟ್ ನೀಡಿಕೆ**
- ಡಿಪ್ಲೊಮಾ, ಪದವಿ ಮತ್ತು ಎಂಜಿನಿಯರಿಂಗ್ ಕಾಲೇಜುಗಳ ಎಲ್ಲ **9,000 ತರಗತಿ ಕೊಠಡಿಗಳನ್ನು Smart Classroom ಗಳಾಗಿ ಪರಿವರ್ತನೆ**
- **UUCMS : Unified University College Management System** ಮೂಲಕ ವಿಶ್ವವಿದ್ಯಾಲಯಗಳ ಎಲ್ಲಾ ಚಟುವಟಿಕೆಗಳು ಒಂದೇ **Digital Portal**ನ ಅಡಿ – **ಇದು ದೇಶದಲ್ಲಿಯೇ ಪ್ರಥಮ**
- **National Academic Depository** – ರಾಷ್ಟ್ರೀಯ ಶೈಕ್ಷಣಿಕ ಕಣಜದಲ್ಲಿ **4.76 ಕೋಟಿ ಶೈಕ್ಷಣಿಕ ದಾಖಲೆಗಳನ್ನು** ಅಪ್‌ಲೋಡ್ ಮಾಡಿ, **ವಿದ್ಯಾರ್ಥಿಗಳಿಗೆ ಅಂಗೈನಲ್ಲೇ ದಾಖಲೆ** ದೊರೆಯುವಂತೆ ಮಾಡಲಾಗಿದೆ




KSHEC ಮತ್ತು National Stock Exchange Academy ನಡುವೆ ಕಾಲೇಜು ವಿದ್ಯಾರ್ಥಿಗಳಿಗೆ ಹಣಕಾಸು ಶಿಕ್ಷಣ ಮತ್ತು ಹೂಡಿಕೆಯ ಅರಿವು ಮೂಡಿಸಲು ಜುಲೈ 12, 2022 ರಂದು MoU ಗೆ ಸಹಿ

NATIONAL MODEL




ಬ್ರಿಟನ್‌ನ ಡಂಡೀ ವಿ.ವಿ ಜತೆಗೆ ವಿದ್ಯಾರ್ಥಿಗಳ ತರಬೇತಿಗಾಗಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು 2023ರ ಫೆಬ್ರವರಿಯಲ್ಲಿ ಒಪ್ಪಂದ ಮಾಡಿಕೊಂಡಿತು. ಇದರ ಅಡಿಯಲ್ಲಿ ಡಂಡೀ ವಿ.ವಿ ಸ್ಕೂಲ್ ಆಫ್ ಲೈಫ್‌ಸೈನ್ಸ್‌ನಲ್ಲಿ ಕರ್ನಾಟಕ ಮೂರು ಸರ್ಕಾರಿ ವಿ.ವಿ ವಿದ್ಯಾರ್ಥಿಗಳಿಗೆ ತರಬೇತಿಗೆ ಅವಕಾಶ

- ಡಿಪ್ಲೋಮ ಶಿಕ್ಷಣವನ್ನು ಇಂಡಸ್ಟ್ರಿಗೆ ಬೇಕಾದ ರೀತಿಯಲ್ಲಿ ಸಂಪೂರ್ಣವಾಗಿ ಪರಿಷ್ಕರಿಸಿ ಅತ್ಯಂತ ಬೇಡಿಕೆ ಇರುವ **45 Specialisation Pathway** ಗಳನ್ನೂ ನೀಡಲಾಗುತ್ತಿದೆ. **AICTE** ಮಾನ್ಯತೆ ಪಡೆದ, ದೇಶದಲ್ಲಿಯೇ ಮೊಟ್ಟಮೊದಲ **International Twinning programme**. ಈ ಮೂಲಕ ಡಿಪ್ಲೋಮ ಮೂರನೇ ವರ್ಷವನ್ನು ಸಂಪೂರ್ಣವಾಗಿ ಅಮೆರಿಕಾದಲ್ಲಿಯೇ ಓದುವ ಅವಕಾಶ ಕಲ್ಪಿಸಲಾಗಿದೆ. ಇದರ ಫಲವಾಗಿ 2 ವರ್ಷದ ಹಿಂದೆ ಇದ್ದ 60% ಅಡ್ಮಿಶನ್ ಈಗ 100% ಆಗಿದೆ.




- ಏಳು ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳನ್ನು **IIT ಮಾದರಿಯಲ್ಲಿ Karnataka Institute of Technologies (KITs)** ಗಳಾಗಿ ಉನ್ನತೀಕರಿಸಲಾಗುತ್ತಿದೆ
- ಹಳ್ಳಿ ಮಕ್ಕಳಿಗೆ ಅತ್ಯುತ್ತಮ ತಾಂತ್ರಿಕ ಶಿಕ್ಷಣ ಒದಗಿಸಲು **RETE scheme** ಅಡಿಯಲ್ಲಿ ಪ್ರತಿ ಜಿಲ್ಲೆಗೆ ಒಂದು ಕಾಲೇಜಿನಂತೆ ಒಟ್ಟು 30 ಕಾಲೇಜುಗಳನ್ನು **Center for Technical Excellence (CoTE)** ಆಗಿ ಮೇಲ್ದರ್ಜೆಗೆ ಏರಿಸಲಾಗುತ್ತಿದೆ
- ಶಿಕ್ಷಣದ ಮೂಲಕ ಒಂದು ಜಿಲ್ಲೆಯನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಲಿಷ್ಠಗೊಳಿಸುವ ಸಾಮರ್ಥ್ಯ ಒಂದು ಯೂನಿವರ್ಸಿಟಿಗೆ ಇದೆ. ಇದಕ್ಕಾಗಿ ತನ್ನ ವ್ಯಾಪ್ತಿಗೆ ಬರುವ ಎಲ್ಲಾ ಕಾಲೇಜುಗಳನ್ನು ಶಕ್ತಿ ಕೇಂದ್ರಗಳನ್ನಾಗಿ ಮಾಡುವ ಜವಾಬ್ದಾರಿ ಒಂದು ಯೂನಿವರ್ಸಿಟಿಗೆ ಇರುತ್ತದೆ. ಆದ್ದರಿಂದ **ಜಿಲ್ಲೆಗೊಂದು ಯೂನಿವರ್ಸಿಟಿ** ಮಾಡಲೇಬೇಕು ಎಂದು ನಮ್ಮ ಸರ್ಕಾರ **25 ಹೊಸ** ಯೂನಿವರ್ಸಿಟಿಗಳನ್ನು ಪ್ರಾರಂಭಿಸಿದೆ.

# ಸರ್ವರಿಗೂ ಕೌಶಲ್ಯ - ಸರ್ವರಿಗೂ ಉದ್ಯೋಗ:



ಬೆಂಗಳೂರಿನಲ್ಲಿ 2023 ರ ಮಾರ್ಚ್ 8 ರಂದು ನಡೆದ 'ನಮೋ ಸ್ತ್ರೀ' ಕಾರ್ಯಕ್ರಮದಲ್ಲಿ 10,000 ಎಸ್‌ಎಚ್‌ಜಿಗಳಿಗೆ ಸ್ತ್ರೀ ಸಾಮರ್ಥ್ಯ ಯೋಜನೆಯಡಿ ತಲಾ ಒಂದು ಲಕ್ಷ ರೂಪಾಯಿಯಂತೆ 100 ಕೋಟಿ ರೂಪಾಯಿ ವಿತರಣೆ

- **ಸಂಜೀವಿನಿ** ಯೋಜನೆಯಡಿ **30 ಲಕ್ಷ ಗ್ರಾಮೀಣ ಮಹಿಳಾ ಉದ್ಯಮಿಗಳ ಸಾಮರ್ಥ್ಯ ವೃದ್ಧಿ**
- ಕಳೆದ ಮೂರು ವರ್ಷಗಳಲ್ಲಿ **2.5 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ತರಬೇತಿ, 1 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ಉದ್ಯೋಗ**
- **TATA Technologies** ಸಹಯೋಗದೊಂದಿಗೆ **180 ITI** ಗಳನ್ನು **ಉನ್ನತೀಕರಿಸಿ,** ನಮ್ಮ ಗ್ರಾಮೀಣ, ಬಡ ಹಾಗೂ ಹಿಂದುಳಿದ ಮಕ್ಕಳಿಗೆ, **Industry 4.0** ಟೆಕ್ನಾಲಜಿಗಳಾದ – **3D printing, AI, IoT** ಗಳಲ್ಲಿ ತರಬೇತಿ ಕೊಡಿಸಿ **ಉದ್ಯೋಗ ಖಾತರಿ ನೀಡಲಾಗುತ್ತಿದೆ**
- Industry ಗೆ ಬೇಕಾದ ಕೌಶಲ್ಯಗಳೇನು? ಆ ಕೌಶಲ್ಯಗಳು ನನ್ನಲ್ಲಿ ಇದೆಯಾ? ನನಗೆ ತಿಳಿಯದ ಕೌಶಲ್ಯಗಳನ್ನು ಎಲ್ಲಿ ಮತ್ತು ಹೇಗೆ ಪಡೆಯಬಹುದು? ಮತ್ತು ಮುಖ್ಯವಾಗಿ ನನ್ನ ಕೌಶಲ್ಯಕ್ಕೆ ತಕ್ಕ ಉದ್ಯೋಗವನ್ನು ನೀಡುವ ಕಂಪನಿಗಳನ್ನು ತಲಪುವುದು ಹೇಗೆ? ಎಂಬ ಯುವಜನರಲ್ಲಿನ ಯಕ್ಷ ಪ್ರಶ್ನೆಗಳಿಗೆ ಉತ್ತರ ನೀಡುತ್ತಿದೆ ನಮ್ಮ **Skill Connect Portal**
- **ದಲಿತ ಉದ್ಯಮಶೀಲ ಮಹಿಳೆಯರಿಗೆ 50,000 ರೂಪಾಯಿವರೆಗೆ ಸೀಡ್ ಕ್ಯಾಪಿಟಲ್ – ದೇಶದಲ್ಲಿಯೇ ಮೊದಲ ವಿಶಿಷ್ಟ ಪ್ರಯೋಗ**

NATIONAL MODEL

ಐ.ಟಿ–ಬಿ.ಟಿ, ಎಸ್&ಟಿ

# ಮುಂಚೂಣಿ ರಾಜ್ಯ:




ಬೆಂಗಳೂರಿನಲ್ಲಿ 2022 ನವೆಂಬರ್ 16 ರಿಂದ 18 ರ ವರೆಗೆ ನಡೆದ ಬೆಂಗಳೂರು ಟೆಕ್ ಸಮಿಟ್‌ನ ರಜತ ಮಹೋತ್ಸವ ಸಂಭ್ರಮ

- ಜಾಗತಿಕ ನಾವೀನ್ಯತಾ ಸೂಚ್ಯಂಕದಲ್ಲಿ, **ಮೇಕಿಂಗ್ ಇಂಡಿಯಾ ಶೈನ್‌**ನಲ್ಲಿ **ಕರ್ನಾಟಕವು ಮೊದಲ ಸ್ಥಾನದಲ್ಲಿ**
- 100+ ಯುನಿಕಾರ್ನ್‌ಗಳ ಪೈಕಿ 40+ ಯುನಿಕಾರ್ನ್‌ಗಳನ್ನು ಕರ್ನಾಟಕದಲ್ಲಿಯೇ ಹೊಂದುವ ಮೂಲಕ ಭಾರತದ **'ಸ್ಟಾರ್ಟ್‌ಅಪ್ ಕ್ಯಾಪಿಟಲ್'** ಎಂಬ ಮನ್ನಣೆ. **22,000 ಸ್ಟಾರ್ಟ್‌ಅಪ್**ಗಳ ನೋಂದಾವಣೆ
- ಸೈಬರ್ ಭದ್ರತೆ, **ಡೇಟಾ** ಮತ್ತು **ಇಂಜಿನಿಯರಿಂಗ್ ಆರ್&ಡಿ** ಯಲ್ಲಿ ನೀತಿ ನಿರೂಪಣೆ ಮಾಡಿದ ಮೊದಲ ರಾಜ್ಯ
- ಸಾರ್ವಜನಿಕ ವಲಯದಲ್ಲಿ **ಅತ್ಯುತ್ತಮ ಬಯೋ ಇನ್‌ಕ್ಯುಬೇಟರ್** ಸ್ಥಾಪಿಸಿದ ರಾಜ್ಯ
- ರಾಜ್ಯದ ರಾಜಧಾನಿಯಿಂದ ಐ.ಟಿ ಉದ್ಯಮಗಳನ್ನು ಹೊರಗಡೆಯೂ ವಿಸ್ತರಿಸಲು **ಬಿಯಾಂಡ್ ಬೆಂಗಳೂರು** ಅಭಿಯಾನವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದ ರಾಜ್ಯ
- **ಎಲಿವೇಟ್ ಕಲ್ಯಾಣ ಕರ್ನಾಟಕ:** ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ಕೆಕೆಆರ್‌ಡಿಬಿ) ನೆರವಿನಿಂದ ಆ ಭಾಗದ **25 ಇನ್ನೊವೇಟಿವ್ ಸ್ಟಾರ್ಟ್‌ಅಪ್**ಗಳಿಗೆ ಸಹಾಯ
- **ಎಲಿವೇಟ್ ಉನ್ನತಿ:** ಪರಿಶಿಷ್ಟ ಜಾತಿ ಮತ್ತು ಪಂಗಡದವರು ಪ್ರಾರಂಭಿಸಿದ ಸ್ಟಾರ್ಟ್‌ಅಪ್‌ಗಳಿಗೆ ಸರ್ಕಾರದಿಂದ **50 ಲಕ್ಷ ರೂಪಾಯಿ**ವರೆಗಿನ **ಫಂಡ್ ಸಪೋರ್ಟ್**

NATIONAL MODEL


- **ಎಲಿವೇಟ್ ವಿಮೆನ್:** ಮಹಿಳೆಯರಲ್ಲಿ ಉದ್ಯಮಶೀಲತೆ ಹೆಚ್ಚಿಸಲು ಆರಂಭಿಸಿದ ಯೋಜನೆ. ಬೆಂಗಳೂರು, ಮೈಸೂರು, ಹುಬ್ಬಳ್ಳಿ–ಧಾರವಾಡ, ರಾಮನಗರ, ದಾವಣಗೆರೆ ಮತ್ತು ಮಂಗಳೂರಿನಲ್ಲಿ 100ಕ್ಕೂ ಹೆಚ್ಚು **ಮಹಿಳಾ ಸ್ಟಾರ್ಟ್‌ಅಪ್‌ಗಳಿಗೆ** ಉತ್ತೇಜನ
- **ಇನ್ನೋವೇಟಿವ್ ಸ್ಟೇಟ್** ಎಂಬ ಹೆಗ್ಗಳಿಕೆ ಉಳಿಸಿಕೊಂಡಿದೆ
- ವಿದೇಶಿ ಬಂಡವಾಳ ಆಕರ್ಷಣೆಯಲ್ಲಿ **ನಂ. 1 ಸ್ಥಾನದಲ್ಲಿ ಕರ್ನಾಟಕ**
- **ESDM ನೀತಿ** ನಿರೂಪಿಸಿದ ಮೊದಲ ರಾಜ್ಯ
- **DPIIT** ಸ್ಟಾರ್ಟ್‌ಅಪ್ **Ranking** ನಲ್ಲಿ **'Best Performer'** ರಾಜ್ಯ
- ಸರ್ಕಾರ ಮತ್ತು ಉದ್ಯಮಗಳ ನಡುವೆ ಸೇತುವೆಯಾಗಿ **Karnataka Digital Economy Mission (KDEM) ಸ್ಥಾಪನೆ**
- ಬೆಂಗಳೂರು, ಧಾರವಾಡ, ರಾಮನಗರ, ದಾವಣಗೆರೆ ಮತ್ತು ಮಂಗಳೂರಿನಲ್ಲಿ **ಬಯೋಟೆಕ್ ವಲಯದ** ಉತ್ತೇಜನಕ್ಕೆ **ಹೆಲಿಕ್ಸ್ ಬಯೋಟೆಕ್ನಾಲಜಿ ಪಾರ್ಕ್ ಸ್ಥಾಪನೆ**
- ಮೈಸೂರು ಮುಕ್ತ ವಿ.ವಿಯಲ್ಲಿ **ಗ್ಲೋಬಲ್ ಟೆಕ್ನಾಲಜಿ ಸೆಂಟರ್ ಪ್ಲಗ್ ಅಂಡ್ ಪ್ಲೇ ಸೌಲಭ್ಯ**
- ವಿಶ್ವ ಮಟ್ಟದ **Anti-Venom** ಸಂಶೋಧನಾ ಅಭಿವೃದ್ಧಿ ಕೇಂದ್ರ ಸ್ಥಾಪನೆಯ ಹಂತದಲ್ಲಿ
- **AI & Robotics, Machine Intelligence, Internet of Ethical Things, Data Science & Efficiency Augmentation** ಕ್ಷೇತ್ರಗಳಲ್ಲಿ ಶ್ರೇಷ್ಠತಾ ಕೇಂದ್ರಗಳು
- **ಕರ್ನಾಟಕ ಇನ್ನೋವೇಷನ್ ಅಥಾರಿಟಿ** ಆರಂಭ
- ಪ್ರಾಥಮಿಕ ಮತ್ತು ಬೆಳವಣಿಗೆಯ ಹಂತದಲ್ಲಿರುವ ಸ್ಟಾರ್ಟ್‌ಅಪ್‌ಗಳಿಗೆ **KITVEN Fund** ಮೂಲಕ ದೀರ್ಘಾವಧಿ ಬಂಡವಾಳ ಸಹಾಯ ಮಾಡಲಾಗುತ್ತಿದೆ. ಇದರಿಂದ ಈ ಉದ್ಯಮಗಳು ಸ್ಪರ್ಧಾತ್ಮಕ ಮಾರುಕಟ್ಟೆಗೆ ತಮ್ಮ ಉತ್ಪನ್ನಗಳನ್ನು/ಸೇವೆಗಳನ್ನು ಸಮರ್ಥವಾಗಿ ಅಣಿಗೊಳಿಸಬಹುದು
- **ಏಷ್ಯಾದ ಅತಿ ದೊಡ್ಡ ಟೆಕ್ ಸಮಿಟ್** ಎಂದು ಹೆಸರಾಗಿರುವ **ಬೆಂಗಳೂರು ಟೆಕ್ ಸಮಿಟ್** ಅನ್ನು ಯಶಸ್ವಿಯಾಗಿ ಸಂಘಟಿಸಲಾಯಿತು
- **Tier-2** ಮತ್ತು **Tier-3** ನಗರಗಳಲ್ಲಿನ ಕಾಲೇಜುಗಳಲ್ಲಿ ಕರ್ನಾಟಕದ ಸ್ಟಾರ್ಟ್‌ಅಪ್ ನೀತಿ ಅಡಿಯಲ್ಲಿ **New Age Innovation Network (NAIN)**, ಆರಂಭ

NATIONAL MODEL



# ರಾಮನಗರ–
# ರೇಷ್ಮೆ ನಗರದ ಪರಿವರ್ತನೆ:

- ರಾಮನಗರದ ಹೆಗ್ಗುರುತು ಎನಿಸಿದ ರೇಷ್ಮೆ ಗೂಡು ಮಾರುಕಟ್ಟೆಯ ಪುನರುಜ್ಜೀವನ
- ರಾಮ ಮಂದಿರ ನಿರ್ಮಾಣಕ್ಕೆ ಆದ್ಯತೆ
- ಬಹು ನಿರೀಕ್ಷಿತ 550 ಹಾಸಿಗೆಗಳ ಜಿಲ್ಲಾ ಆಸ್ಪತ್ರೆ ಉದ್ಘಾಟನೆ
- ಶ್ರೀರಂಗ ಏತ ನೀರಾವರಿ, ಸತ್ತೇಗಾಲ ಕುಡಿಯುವ ನೀರಿನ ಯೋಜನೆ ಮತ್ತು ಕೆರೆಗಳ ಭರ್ತಿ ಯೋಜನೆಗೆ ಒತ್ತು





ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆ: ಕಲಾವಿದನ ಪರಕಲ್ಪನೆಯಲ್ಲಿ



ಜಿಲ್ಲಾ ಆಸ್ಪತ್ರೆ: ನೂತನ ಕಟ್ಟಡ

- ಜಲ ಜೀವನ ಮಿಷನ್ ಅಡಿಯಲ್ಲಿ 2.31 ಲಕ್ಷ ಮನೆಗಳಿಗೆ ನಲ್ಲಿನೀರು ಸಂಪರ್ಕ
- ಮಾಗಡಿಯಲ್ಲಿ ನೂತನ ಕೈಗಾರಿಕಾ ಪ್ರದೇಶ ಸ್ಥಾಪನೆ
- ಬಿಡದಿ–ಹಾರೋಹಳ್ಳಿ ಕೈಗಾರಿಕಾ ಪ್ರದೇಶದ ವಿಸ್ತರಣೆ
- ಕೆಂಪೇಗೌಡ ಸರ್ಕ್ಯೂಟ್ ಮೂಲಕ ಪ್ರವಾಸೋದ್ಯಮಕ್ಕೆ ಉತ್ತೇಜನ
- ರಾಮನಗರದಲ್ಲಿ ಐಐಟಿ ಮಾದರಿಯಲ್ಲಿ ಎಂಜಿನಿಯರಿಂಗ್ ಕಾಲೇಜು ಅಭಿವೃದ್ಧಿ
- ಹೈಟೆಕ್ ಮಾವು ಮಾರುಕಟ್ಟೆ ನಿರ್ಮಾಣ
- ಚಿಕ್ಕಕಲ್ಯಾ ಗ್ರಾಮದಲ್ಲಿ ನೂತನ ಜಿಟಿಟಿಸಿ ಆರಂಭ. ಶೀಘ್ರದಲ್ಲಿ ಉದ್ಘಾಟನೆ
- ಮಾಗಡಿ ಬಳಿಯ ತಿಪ್ಪಸಂದ್ರದಲ್ಲಿ ನೂತನ ಸಂಸ್ಕೃತ ವಿಶ್ವವಿದ್ಯಾಲಯ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿ
- ಕೆಂಪಾಪುರ ಗ್ರಾಮದ ಕೆಂಪೇಗೌಡ ಸಮಾಧಿ ಅಭಿವೃದ್ಧಿ
- ರಾಮನಗರದಲ್ಲಿ ಬೆಂಗಳೂರು ವಿ.ವಿ ಕ್ಯಾಂಪಸ್ ನಿರ್ಮಾಣ ಕಾರ್ಯ ಪ್ರಗತಿಯಲ್ಲಿ

# ಭರವಸೆಯ ನಾಯಕ:

ಡಾ. ಅಶ್ವತ್ಥ ನಾರಾಯಣ ಅವರು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ **108 ಅಡಿ ಎತ್ತರದ ನಾಡಪ್ರಭು ಕೆಂಪೇಗೌಡ ಕಂಚಿನ ಪ್ರತಿಮೆ**ಯನ್ನು ಸ್ಥಾಪಿಸುವಲ್ಲಿ ಮುಂಚೂಣಿ ಪಾತ್ರ ವಹಿಸಿದ್ದರು. ಆ ಮೂಲಕ ಬೆಂಗಳೂರಿನ ನಿರ್ಮಾತೃವಿಗೆ ತಕ್ಕ ಸ್ಮಾರಕವನ್ನು ನಿರ್ಮಿಸುವ ನಾಡಿನ ಸಂಕಲ್ಪವನ್ನು ಸಾಕಾರಗೊಳಿಸಿದ ನೇತಾರ ಎನಿಸಿದರು. ಕೆಂಪೇಗೌಡರ ಅಭಿವೃದ್ಧಿಯ ಪರಿಕಲ್ಪನೆಯನ್ನು ಮುಂದುವರಿಸುವ ಉದ್ದೇಶದಿಂದಲೇ ಅವರು ಅದಕ್ಕೆ
**'ಪ್ರಗತಿಯ ಪ್ರತಿಮೆ' (Statue of Prosperity)** ಎಂದು ಹೆಸರು ಇಟ್ಟರು. ಈ ಪ್ರತಿಮೆಯು ಇಡೀ ವಿಶ್ವದಲ್ಲಿಯೇ ನಗರದ ನಿರ್ಮಾತೃವೊಬ್ಬರ ಅತಿ ಎತ್ತರದ ಪ್ರತಿಮೆ ಎಂದು ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿಯೂ ದಾಖಲಾಗಿದೆ.

ಕೆಂಪೇಗೌಡರ ಕನಸಿನ ಬೆಂಗಳೂರನ್ನು 'ಗ್ಲೋಬಲ್ ಸಿಟಿ' ಯಾಗಿ ಬೆಳಸುವಲ್ಲಿ ಡಾ. ಅಶ್ವತ್ಥ ನಾರಾಯಣರದ್ದೂ ಅವಿರತ ಶ್ರಮವಿದೆ. ಅವರು ಈ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿಯೇ ಬೆಂಗಳೂರನ್ನು ಒಂದು **ಭವಿಷ್ಯದ ಅಗತ್ಯಗಳನ್ನು ಪೂರೈಸುವಂತಹ ನಗರ**ವಾಗಿಸಲು ಪ್ರಮುಖ ನಿರ್ಣಯಗಳನ್ನು ತೆಗೆದುಕೊಂಡರು.

ಬೆಂಗಳೂರು ಇಂದು ಬೆಳೆಯುತ್ತಿರುವ **ತಂತ್ರಜ್ಞಾನದ ಹಬ್** ಎಂದು ಅನಿಸಿದೆ. ಇಲ್ಲಿ ಅನೇಕ ಐ.ಟಿ ಕಂಪೆನಿಗಳು ಮತ್ತು ಸ್ಟಾರ್ಟ್‌ಅಪ್‌ಗಳು ತಲೆ ಎತ್ತುತ್ತಿವೆ. ಡೇಟಾ ಸೈನ್ಸ್ ಮತ್ತು ಕೃತಕ ಬುದ್ಧಿಮತ್ತೆ ವಲಯದಲ್ಲಿ ಬೆಂಗಳೂರು ಅತ್ಯುತ್ತಮ ತಾಣವಾಗಿದೆ. ಉನ್ನತ ಶಿಕ್ಷಣ ಮತ್ತು ವೈದ್ಯಕೀಯ, ತಂತ್ರಜ್ಞಾನದ ಶಿಕ್ಷಣಕ್ಕೆ ಬೆಂಗಳೂರು ಹೇಳಿ ಮಾಡಿಸಿದಂತಹ ನಗರ ಎಂಬ ಹೆಗ್ಗಳಿಕೆ ಗಳಿಸಿದೆ. ಅದಕ್ಕಾಗಿಯೇ ಈ ನಗರವನ್ನು ಅವಕಾಶಗಳ ನಗರ ಎಂದು ಕರೆಯುತ್ತಿರುವುದು ಸೂಕ್ತವಾಗಿದೆ.

- **ಬೆಂಗಳೂರು ಮೆಟ್ರೊಪಾಲಿಟನ್ ಲ್ಯಾಂಡ್ ಟ್ರಾನ್ಸ್‌ಪೋರ್ಟ್ ಅಥಾರಿಟಿ (ಬಿಎಂಎಲ್‌ಟಿಎ) ಕಾಯ್ದೆ** ಮತ್ತು **ಬಿಬಿಎಂಪಿ ಕಾಯ್ದೆ** ರೂಪಿಸಿದ್ದು
- **ಬಿಎಂಆರ್‌ಡಿಎ** ಬಲವರ್ಧನೆ
- **ಪೆರಿಫೆರಲ್ ರಿಂಗ್ ರಸ್ತೆ** ಮತ್ತು **ಬೆಂಗಳೂರು ಸ್ಯಾಟಲೈಟ್ ಟೌನ್ ರಿಂಗ್ ರಸ್ತೆ** ಅಭಿವೃದ್ಧಿಗೆ ವೇಗ
- **ಕಾವೇರಿ 5 ನೇ ಹಂತದ** ಕಾಮಗಾರಿಗೆ ತೀವ್ರಗತಿ
- **ಬೆಂಗಳೂರು ಮೆಟ್ರೊ ಯೋಜನೆ**ಗೆ ಒತ್ತಾಸೆ
- ಬಹುಕಾಲದಿಂದ ಕಾಯುತ್ತಿದ್ದ **ಉಪನಗರ ರೈಲು ಯೋಜನೆ ಅನುಷ್ಠಾನ**
- **ಮುಖ್ಯಮಂತ್ರಿಗಳ ವಸತಿ ಯೋಜನೆ**ಯಡಿ, **1 ಲಕ್ಷ ಬಿಪಿಎಲ್ ಕುಟುಂಬಗಳಿಗೆ ಮನೆಗಳ ಹಂಚಿಕೆ**



ಪ್ರಗತಿಯ ಪ್ರತಿಮೆಯು ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರಿದ ಅಮೃತ ಗಳಿಗೆಯ ನೆನಪು

## ಪ್ರಗತಿಯ ಪ್ರತಿಮೆ



ನಮ್ಮ ಮಲ್ಲೇಶ್ವರ
Namma Malleshwara
#ಸಾಂಸ್ಕೃತಿಕಮಲ್ಲೇಶ್ವರ

# ದೇವಭೂಮಿ ಮಲ್ಲೇಶ್ವರ
# ಸಾಂಸ್ಕೃತಿಕ ರಾಯಭಾರಿ:


ಆದಿ ಶಂಕರಾಚಾರ್ಯರ ಜಯಂತಿ



ರಾಮಾನುಜಾಚಾರ್ಯರಿಗೆ ನಮನ


ಮಧ್ವ ನವಮಿ


ಕುವೆಂಪು ಜಯಂತಿ


ಅಂಬೇಡ್ಕರ್ ಅವರಿಗೆ ಗೌರವ



ಬಸವ ಜಯಂತಿ


ಸ್ವಾಮಿ ವಿವೇಕಾನಂದರ ಜಯಂತಿ


ಮಹರ್ಷಿ ವಾಲ್ಮೀಕಿಗೆ ಪ್ರಣಾಮ


ಡಾ. ರಾಜ್‌ಕುಮಾರ್
ಜನ್ಮ ದಿನದ ಸಂದರ್ಭದಲ್ಲಿ

ನಮ್ಮ™
ಮಲ್ಲೇಶ್ವರ
Namma
Malleshwara



# “ಅಭಿವೃದ್ಧಿಯ ಕನಸು ನನಸಾಗಲು ಅಂತಃಕರಣದ ಯೋಜನೆ ಬೇಕು”

**ಡಾ.ಸಿ.ಎನ್. ಅಶ್ವತ್ಥ ನಾರಾಯಣ**

ಶಾಸಕರು, ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ
ಉನ್ನತ ಶಿಕ್ಷಣ, ವಿದ್ಯುನ್ಮಾನ, ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು
ಕರ್ನಾಟಕ ಸರ್ಕಾರ

Malleshwara Sahaaya 2.0: 9945 100 200
drashwathcn DrAshwathnarayan DrCNAshwathnarayan www.drashwath.in